Reg. No. B 1270. Monday, 5th January, 1942

ವರ್ಷ ೭೪

ಕಾನಡಾವೃತ್ತ.

ಸಂಚಿಕೆ ೨೬

THE KANARA NEWS

ಪತ್ರದ ವರ್ಗಣೆ:

ಕುಮಟೆಯಲ್ಲಿ ಆಗಾವು
ರೂಪಾಯಿ ೨-೪-೦
ಮುನಿಸಿಪಾಲಿಟಿಗಳಿಂಗ
ರೂ ೩-೧-೦.
ಪ್ರಿ ಪೆ. ಆಂಶೆಪೆಟ್ಟ ಸೇರಿ
ರೂಪಾಯಿ ೩-೪-೦.
ಬಿಡಿ ಸಂಚಿಕೆಗೆ ೦-೧-೦
ಹಳೇ ಸಂಚಿಕೆಗೆ ೦-೨-೦

ನೇತಿಹಿತಿಕಾಂ ಶ್ರೇಷ್ಠಾಂ ಯಾತಿ ಲೋಕೇ ಜನಪ್ರಹಿತಕರಾಂ ಸ್ವಜನೇ ಪಾರಿಜೇಷ್ಟೆ.।
ಇತಿ ಮಹತಿ ವಿರೋಧೇ ವರ್ತಮಾನೇ ಸಮಾನೇ ಭೂಪತಿಜನಪದಾನಾಂ ದುರ್ಲಭಂ ಕಾರ್ಯಕರ್ತಾ ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ.

ಕನ್ನಡ, ಇಂಗ್ಲಿಷ ಮೈಕಾ ಟೈಪಿನ (೧೫ ಎಮ್ ಉದ್ದ) ೩ ಸಾಲುಗಳವರೆಗೆ ರೂ ೧-೮-೦
೩ ನಂತರ ಪ್ರತಿಸಾಲಿಗೆ ೦-೩-೦
ಹಣ್ಣಿಂಗದ ಸಾಲು ಎಷ್ಟು ಕೊಟ್ಟರೆಯಾದರೂ ೩ ರೂಪಾಯಿಂದ ಅಷ್ಟು ಸಾಲುಗಳು ಓಪಿಯಲ್ಪಡುತ್ತವು

ಬಾಕಿ ಜಾಹಿರಾತುಗಳಿಗೆ ಜಾಗ ಪತ್ರದ್ಯಾರ ಯಾ ಸಮಯಕ್ಕೆ ತಿಳಿಸಲ್ಪತ್ತವದು.

-*(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೫ ನೆಯಹೆ ಜನವರಿ ಸನ್ ೧೯೪೨ನೇ ಇಸವಿ)*-



ಶ್ರೀ ಧೂತಪಾಪೇಶ್ವರ ಪನವೇಲ, ಲಿ.,

ಕರ್ನಾಟಕ ಕೇಂದ್ರ:- ಯುನ್ಯಾಟಿಡ್ ಏಜನ್ಸೀಜ, ಹುಬ್ಬಳ್ಳಿ.

ಕಾರವಾರ:— ಮೆಸರ್ಸ ಮುಜುಮದಾರ-ಕಶಬೇಕರ ಬ್ರದರ್ಸ
ಅಂಕೋಲಾ:— ದಿ ಸ್ಟೇಷನರಿ ಡಿಪೋ
ಕುಮಟಾ:— ದೇವಪ್ಪಾ ಅಯ್ಯು ನಾಯ್ಕ.
ಹೊನ್ನಾವರ— ಮೆಸರ್ಸ ಕಲ್ಯಾಣಪುರ ಬ್ರದರ್ಸ.
ಶಿರಸಿ:— { ಶಿರಸಿ ಡ್ರಗ್ ಸ್ಟೋರ್ಸ
ಎಸ್. ಎಲ್. ಧಾಕಪ್ಪಾ ಎಂಡ್ ಸನ್ಸ್
ಸಿದ್ದಾಪುರ:— ಮೆಸರ್ಸ ಶಾಮಯ್ಯನ ಬ್ರದರ್ಸ
ಹಳಿಯಾಳ:— ಎಸ್. ಪಿ ಹಳ್ಳೇಕೇರಿ.

"ನ್ಯಾರ ಆಫ್ ಕೆನರಾ ಪ್ರೆಸ್",
ಕುಮಟಾ.

—*—

ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲಿಷ, ಗುಜರಾತಿ ಭಾಷೆಯಿಂದ ಬೇಕಾದ ನಮೂನೆಯ ಕಲರ ಪ್ರಿಂಟಿಂಗ ವಗೈರೆ ಸಣ್ಣ ದೊಡ್ಡ ಛಾಪಾ ಕೆಲಸಗಳನ್ನೂ, ಪುಸ್ತಕ-ಮುದ್ರಣವೂ, ರೂಲಿಂಗ ಬ್ಯಾಂಡಿಂಗ ಕೆಲಸವೂ ಉತ್ತಮವಾಗಿ ಸುಲಭ ದರದಲ್ಲಿ ತಕ್ಕ ಕಾಲಕ್ಕೆ ತಯಾರಿಸಿ ಕೊಡಲಾಗುವದು

ಇದಲ್ಲದೆ ಕೋರ್ಟ ಕಛೇರಿ ಉಪಯೋಗದ ಪಮಾಲತ ವಗೈರೆ ಛಾಮ್ಯಗಳೂ, ಕಸ್ಟಮ್ ಕಛೇರಿಯ ಶಿಪ್ಪಿಂಗ ಬೀಲು ಸೆಕ್ಕಿ ವಗೈರ ಛಾಮ್ಯಗಳೂ, ಗೇಣಿ ರಶೀದಿ ಬೂಕು, ಗೇಣಿಚೀಟಿ ಎದುರ್ಸುಡಿ ಛಾಮ್ಯಗಳೂ ವಗೈರೆ ಮಾರಾಟಕ್ಕೆ ತಯಾರಾ ಸಿಗುತ್ತವೆ ನಿಮ್ಮ ಛಾಪಾ ಕೆಲಸಗಳನ್ನು ನಮ್ಮಲ್ಲಿಗೇ ಕಳಿಸಿರಿ ಒಮ್ಮೆ ಒನುಭವ ತಕ್ಕೊಂಡು ನೋಡಿರಿ !

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

(ಶ್ರೀಯುತ ಹಿಂದುಸ್ಥಾನದಲ್ಲಿ ಸಂಘಟಿತವಾದದ್ದು)

ಹೆಡ್ ಆಫೀಸು — ಕುಂದಾಪುರ.

ಬ್ರೆಂಚ ಆಫೀಸುಗಳು ಅಂಕೋಲಾ ಕುಂದಾಪುರ, ಬೈಂದೂರು, ಕೋಟೇಶ್ವರ, ಕುಮಟಾ, ಗೋಕರ್ಣ, ಕಾರವಾರ, ಹುನ್ನೇರಿ, ಶಿವಮೊಗ್ಗಾ ತರೀಕೆರೆ, ನಗರ ಸೋಮವಾರಪೆ ಟೆ ಮತ್ತು ವೀರರಾಜಪೆ.ಟೆ

ಕಾಯಂ ರೇವುಗಳು, ಸೇವಿಂಗ್ಸ ಬೇಂಕ್ ರೇವುಗಳು ಮತ್ತು ಚಾಲು ರೇವುಗಳು ಸಹ ಅಂಗೀಕರಿಸಲ್ಪಡುವವು

ಭಂಗಾರದ ದಾಸಿನೆಗಳ ಮೇಲೆ ಇತರ ವ್ಯಾಪಾರದ ಸ್ಥಾಲಿಗಳ ಮೇಲೆ ಸಲಕ್ತಿನ ದರದ ಬಡ್ಡಿಯಲ್ಲಿ ಸಾಲ ಕೊಡಲ್ಪಡುವದು
ವ್ಯಾಪಾರದ ಕೇಂದ್ರಗಳಾಗಿ ಡ್ರಾಫ್ಟಗಳು, ಚೆಕ್ಕುಗಳು ಸಹಿ ಕಾದಲ್ಪಡುವವು ಎಷ್ಟಿ ಕಾದಲು ಬೇಕಾದ ಸ್ಥಳಹಾರಗಳು ಸಲಕ್ತಿನ ದರದಿಂದ ನಡಿಸಲ್ಪಡುವವು.

ಕುಂದಾಪುರ,
1-8-1941

The Agricultural & Industrial Bank, Ltd

ಸ್ವತಂತ್ರ ಭಾರತವೇ ರಾಷ್ಟ್ರ-ಸಂರಕ್ಷಣೆ ಮಾಡಬಲ್ಲದು.

ಮಹಾತ್ಮರು ರಾಷ್ಟ್ರಸಭೆಯಿಂದ ಪ್ರತ್ಯೇಕವಾದರು.

ಕೊಂಗ್ರೆಸ ಕಾರ್ಯಕಾರಿ ಮಂಡಳದ ಮಹತ್ವದ ನಿರ್ಣಯ

ಕಳೆದ ಡಿಸಂಬರ ತಾ ೩೦ರಿ ದ ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಭೆ ಸತ್ಯಾಗ್ರಹದ ಇತಿಹಾಸದಲ್ಲಿ ಪ್ರಸಿದ್ಧವಿರುವ ಎರಡೋಲಿಯಲ್ಲಿ ಕೂಡಿತ್ತಷ್ಟೆ. ಈ ಸಭೆ ತಾ ೨೭ರಿಂದ ತಾ ೩೦ರಿ ವರೆಗೆ ಸಂಜೆಯ ವರೆಗೆ ಅಂದರೆ ಸುಮಾರು ೮ ದಿನ ದೀರ್ಘ ಚರ್ಚೆ ಮಾಡಿ ಮತ್ತು ಜಗತ್ತಿನ ಸಂಪೂರ್ಣ ಪರಿಸ್ಥಿತಿಯನ್ನು ಆಲೋಚಿಸಿ ತಾ ೩೦ನೇ ಗೆ ಕೊನೆಯ ನಿರ್ಣಯವನ್ನು ಕೈಕೊಂಡಿತು ೧೯೪೦ನೇ ಇಸವಿಯಲ್ಲಿ ಮುಂಬಯಿಯಲ್ಲಿ ಕೂಡಿದ ಅ ಭಾ ಕೊಂ ಸಮಿತಿಯು ತೀರ್ಮಾನದಲ್ಲಿ ಅಡಕವಾದ ಅಹಿಂಸಯ ತತ್ವದ ವ್ಯಾಪ್ತಿಯ ಕುರಿತು ಮಹಾತ್ಮರಿಗೂ ಕಾರ್ಯಕಾರಿ ಮಂಡಳದ ಒಹುಸಂಖ್ಯಾಕ ಸದಸ್ಯರಿಗೂ ಮತ ಭೇದವಾದಂತೆ ಕಂಡು ಬರುತ್ತಿದೆ ಈ ಹಾಗೂ ಮುಂದಿನ ಯಾವತ್ತೂ ಯುದ್ಧಗಳಲ್ಲಿ ಬಾರತವು ಹಿಂಸೆಯ ಪಕ್ಷವನ್ನು ಸೇರಬಾರದೆಂದು ಮಹಾತ್ಮರ ನಿಸ್ಪಾಹ ಅಹಿಂಸಯ ವ್ರತ ಪೂಜ್ಯವಿರುತ್ತಿದ್ದಾಗ್ಯೂ ಈಗಿನ ಪರಿಸ್ಥಿತಿಯಲ್ಲಿ ಅದಕ್ಕೆ ಅಂಟಿಕೊಂಡು ಕೂಡುವದು ಭಾರತೀಯರಿಗೆ ಸಾಧ್ಯವಿಲ್ಲೆಂದು ರಾಷ್ಟ್ರೀಯ ಮುಂದಾಳುಗಳ ಅಂಬೋಣ ಅಂತು ಕೊನೆಗೆ ಕಾರ್ಯಕಾರಿ ಮಂಡಳವು ಮಹಾತ್ಮಾಜಿಯವರನ್ನು ರಾಷ್ಟ್ರೀಯ ಸಭೆಯ ನೇತೃತ್ವದ ಹೊಣೆಯಿಂದ ಮುಕ್ತಗೊಳಿಸಿ – ಆದರೂ ಅವರ ಅತೀವಾರ್ದವನ್ನು ಪತಕೊಂಡು – ಈ ಕೆಳಗಿನ ಆದಶದ ಒಂದು ಗೊತ್ತುವಳಿಯನ್ನು ಮಾಡಿ ತಾ ೩೦ನೇ ದಿನ ಸಂಜೆ ಅದನ್ನು ಪ್ರಕಟನೆಗೆ ಕೊಟ್ಟತು

ಗೊತ್ತುವಳಿಯ ಸಾರ

ಈ ೧೪ ತಿಂಗಳ್ಗಲ್ಲಿದ ರಾಷ್ಟ್ರೀಯ ಹಾಗೂ ಜಾಗತಿಕ ಪರಿಸ್ಥಿತಿಯೆಳಗನ್ನೆಲ್ಲ ಸ್ಥಿತ್ಯಂತರಗಳನ್ನು ಮಂಡಳವು ಸಮಾಲೋಚಿಸಿದೆ ಯುದ್ಧವು ಹಿಂದು ಸ್ಥಾನದ ಬಾಗಿಲಿಗೆ ಬಂದಿದ್ದರಿಂದ ಹಳೆಯ ಸಮಸ್ಯೆಗಳು ಹೊಸ ರೂಪವನ್ನು ತಳೆದುವ ಈ ಕಾಲದಲ್ಲಿ ರಾಷ್ಟ್ರಕ್ಕೆ ಯೋಗ್ಯ ದಾರಿ ತೋರಿಸಿ ಕೂಡುವ ಹೊಣೆಯನ್ನು ಈ ಮಂಡಳ ಹೊರಬೇಕಾಗಿದೆ ಅದು ಜನತೆಯ ಸಂಪೂರ್ಣ ಸಹಕಾರ ಸಿಕ್ಕಲೆ ಮಾತ್ರ ಸಾಧ್ಯ – ಮಂಡಳವು ರಾಷ್ಟ್ರದ ಹಳೆಯ ಧ್ಯೇಯ ವನ್ನು ತತ್ಪರ್ಶನವನ್ನು ಮರೆತಿಲ್ಲ ಅವನ್ನೇ ಮಂಡಳವು ಹೊಸ ಪರಿಸ್ಥಿತಿಯ ಮತ್ತು ಜಾಗತಿಕ ಸ್ವಾತಂತ್ರ್ಯದ ಸನ್ನಿವೇಶದಲ್ಲಿಟ್ಟು ಆಲೋಚಿಸಿದೆ ಭಾರತೀಯರಿಗೆ ಪೂರ್ಣ ಸ್ವಾತಂತ್ರ್ಯ ಬೊರಯುವ ಯತ್ನವಶ್ಯ ಈಗಿನ ಜಾಗತಿಕ ಸಂಬಂಧಲಲ್ಲಿಂತೂ ತೀರ ಅವಶ್ಯ ವಿರುವೆಂತಲೂ ಜಗತ್ತಿನ ಸ್ವಾತಂತ್ರ್ಯದ ದೃಷ್ಟಿಯಿಂದಲೂ ಕೂಡ ಭಾರತವು ಸ್ವತಂತ್ರ ಸಾಮ್ರಾಜ್ಯವಪಡೆಯಿರುತ್ತದಂದೂ ಮಂಡಳವು ಮನಸಂತಿಪೆ ಅದರಂತೆ ಬಗ್ಗತ್ತಿನೊಳಿಗಿನ ಸ್ವತಂತ್ರ ರಾಷ್ಟ್ರಗಳ ಸಹಕಾರದ ತಳಹದಿಯ ಮೇಲೆಯೇ ನಿಜವಾದ ಶಾಂತಿ ಮತ್ತು ಸ್ವಾತಂತ್ರ್ಯ ಜಗತ್ತಿನಲ್ಲಿ ಸ್ಥಾಪಿಸಲ್ಪಡಬಲ್ಲವೆಂದು ಮಂಡಳ ತಿಳಿಸಿರುತ್ತದೆ

ಸ್ವಯಂಪೂರ್ಣ ಸ್ವಾತಂತ್ರ್ಯವಾಗುತ್ತಕ್ಕೇ ಮಂಡಳವು ನಾಝಿಗಳ ಹಾಗೂ ಫೆಸ್ಸರ ಆಕ್ರಮಣ ವೃತ್ತಿಯ ಸ್ನು ಬಲವಾಗಿ ಖಂಡಿಸಿ ಸ್ವಜಂತ್ರ ಪ್ರಜಾಪ್ರಭುತ್ವ ಗಳಿಗೆ ಬೆಂಬಲ ಕೊಡುವ ಶಕ್ತಿಗಳೊಡನೆ ಸಹಕರಿಸಲು ತನ್ನ ಸಿದ್ಧತೆಯ ಬಗೆಯೂ ವ್ಯಕ್ತಗೊಳಿಸಿ ಈ ಯುದ್ಧದಲ್ಲಿ ಬ್ರಿಟಿಶರ ಧ್ಯೇಯ ಮತ್ತು ಗುರಿಯೇನೆಂದು ಸ್ಪಷ್ಟೀಕರಿಸಬೇಕೆಂತಲೂ ಹಿಂದ ಸೂಮಿಯ ಸ್ವಾತಂತ್ರ್ಯಕ್ಕೆ ಮನ್ನಣೆ ಕೊಡಬೇಕೆಂತಲೂ ಕೇಳಿಕೊಂಡಿತ್ತು ಆದರೆ ಬ್ರಿಟಿಶ ಸರಕಾರದವರು ಆ ಒಂಕ ಮಾಡಿದ ನೋಪಣೆಗಳನ್ನು ಅನುಸರಿಸಿದ ರಾಜನೀತಿಯನ್ನೂ ನೋಡಲಾಗಿ ಹಿಂದು ಸ್ಥಾನವನ್ನು ತನ್ನ ದಂಸ್ಪದಲ್ಲಿಟ್ಟುಕೊಂಡು ಬೇಕಾದಂತೆ ಸುರಿಯುವದೇ ಆ ಸರಕಾರದ ಮೂಲಭೂತ ಸ್ವಭಾವವೆಂದು ಸ್ಪಷ್ಟವಾಗಿ ಕಂಡುಬಂದಿತು ಆ ಸರಕಾರವು ಹಿಂದೀ ರಾಷ್ಟ್ರೀಯತ್ವವನ್ನು ಕದಿಗೆಡಿಸಿ ರಾಷ್ಟ್ರಭೇದಿ ಪ್ರಾಮಿ ಜನರಿಗೆ ಪ್ರಾತಿನಿಧ್ಯ ಕೊಡುತ್ತಿರುವದು ಕಂಡುಬಂದಿತು ರಾಷ್ಟ್ರೀಯ ಸಭೆಯ ವರ ಸಂದಾನದ ಸೂಚನೆ ಕಿನ್ನಪ್ಪೆ ಆಫ್ಘ ಪುಂದ ಗಾಮಿ ರಾಜಕಾರಣಿಗಳ ಸೂತ್ರಗಳನ್ನೂ ಅದು ಧಿಕ್ಕರಿಸಿತು

ಸತ್ಯಾಗ್ರಹ ಸಮರವೂ ಯಿತು

ಆದ್ದರಿಂದ ಭಾರತೀಯರ ಮೂಲಭೂತ ಹಕ್ಕುಗಳ ಹಾಗು ರಾಷ್ಟ್ರೀಯತ್ವದ ಅಭೇದ ತ್ವದ ರಕ್ಷಣೆಗಾಗಿ ಮಹಾತ್ಮಾಜಿಯವರೆ ಮೊಮೋಗಬೇಕೆಂಬಯಿತು ಮಹಾತ್ಮರ ದೂರ ಯುದ್ಧದಲ್ಲಿ ಸಿಲುಕಿಬಿದ ವಿಧೋಧಿ ಸರಕಾರಕ್ಕೆ ಇನ್ನೂ ಸಂಕಟದಲ್ಲಿ ನೂಕಬಾರದೆಂಬ ಉದ್ದೇಶದಿ ದ ಸಾರ್ವತ್ರಿಕ ಸತ್ಯಾಗ್ರಹವನ್ನು ಹೂಡದ ತ ಪ್ಪ ಆಯಿಸಿದ ಜನೆಂದನ್ನೇ ಸತ್ಯಾಗ್ರಹ ಮಾಡಿಸಿದರು ಈ ರೀತಿ ಖಂಡಾಂ ಜನರು ಸತ್ಯಾಗ್ರಹ ಮಾಡಿ ಬಂಧಿಸಲ್ಪಟ್ಟರಿಂದ ಸುಮಾ ಅನುಭವಿಸಿದ್ದಾರೆ ಗಡಿನಾಡಿನಲ್ಲೂ ಬೇರೆ ಪ್ರದೇಶಗಳಲ್ಲೂ ನೆರೆಹಿಡಿಯದ ಸಾವಿರಗಟ್ಟಲೆ ಸತ್ಯಾಗ್ರಹಿಗಳೂ ಇದ್ದಾರೆ ಮಹಾತ್ಮರು ಪಹಿಸಿದ ನಿಷ್ಕರ್ಷದ ಒಗ್ಗೂ ರಾಷ್ಟ್ರವು ಅವರ ಕರೆಗೆ ಕೊಟ್ಟ ಉತ್ತರಗಳ ಒಗ್ಗೂ ಮಂಡಳವು ಆಭಾರಿಯಿದ ಬ್ರಿಟಿಶ ಸರಕಾರವು ಹಿಂದೀ ಸ್ವತಂತ್ರತ್ವಕ್ಕೆ ಪ್ರತಿಕೂಲವಿರುತ್ತದಂದು ಈ ಚರ್ಚೆಯಲ್ಲಿ ಸಿದ್ಧವಾಗಿದೆ ಸ್ವತಂತ್ರತ್ವ ಮತ್ತು ಸಜಂಸ್ಫಿಲಿ ಕ್ಕಾಗಿ ತಾವು ಹೋರಾಡುತ್ತಿದ್ದೇವೆಂದು ಕಾಲ ಕಾಲಕ್ಕೆ ಅವರು ವೆ ಡುಪ್ತರವ ಬಯಿಬಡಾಯಿ ಗೂ ಯುದ್ಧದಿಂದ ಒಡಗಿದ ಕಷ್ಟ ನಷ್ಟಗಳ ಹಿಂದ ಬೂಮಿಯ ಸಂಬಂಧದ ಬ್ರಿಟಿಶ ಧೋರಣೆಗಳ ದೃಷ್ಟಿಯನ್ನಾಗಲಿ ನಿಷ್ಠಾವಂತಯನ್ನಾಗಲಿ ಎಬ್ಬಿಸ್ಟೂ ಬದಲಿಸಿರುಸಿದ್ದಿಲ್ಲ

ಇನ್ನೂ ನಡದ ಸತ್ಯಾಗ್ರಹಿ ಕೈದಿಗಳ ಬಿಡುಗಡೆಗಾಗಿ ವಿಶೇಷ ಮಹತ್ವ ಕೂಡಲ ಗುವದಿಲ್ಲ ಈ ಬಾಬ್ತಿನ ವರ್ತನೆ ಪಾಡಕ ಕಾರಣಗಳ ಪರಂಪರೆಯನ್ನೂ ಆ ಕಾಲದಲ್ಲಿ ಲಧಿಕಾರಿಗಳು ಆದಿದ ನುಡಿಗಳನ್ನೂ ನೆ ೦ ಲಾಗಿ ಸರಕಾರದ ಅಂತರಂಗವಲ್ಲಿ ಏನೇನೂ ಪರಿವರ್ತನೆಯಾದದ್ದು ಕಂಡುಬರುವದಿಲ್ಲ ಮಾತ್ರವಲ್ಲ ಮಿಯು ಸ್ವತಂತ್ರವಾಗಬೇಕೆಂಬ ಉತ್ಕಟೇಚ್ಛೆ ಪ್ರದರ್ಶಿಸಿದ ಒಂದೇ ಒಂದು ಅಪರಾಧಕ್ಕಾಗಿ ನೂರಾರು ಬಾಂಧವರು ಇನ್ನೂ ಸ್ಥಾನಬದ್ಧೆ ಕೈದಿಗಳಾಗಿ ಕೊಳೆಯುತ್ತಿದ್ದಾರೆ ಮೊನ್ನೆ ಮೊನ್ನೆ ಕೆಲವರಿಗೆ ಸೆರೆಹಿಡಿದಮಂಟು ಇವರಿಗೆಲ್ಲ ನಡಿಸಿಕೊಳ್ಳುವ ನಮೂನೆ ನೋಡಿದರೆ ಸರಕ ರದ ಹೆಳೆಯ ನೀತಿಯೇ ಇನ್ನೂ ವಂಪಿವರಿಯುತ್ತಿದೆಯೆಂದ ಟೀಕ್ಕಿಯಾಗುತ್ತಿದೆ

ಮಂಡಳದ ನಿರ್ಧಾರ

ಈ ರೀತಿ ಬ್ರಿಟನ್ನಿನ ದೃಷ್ಟಿಕೋನ ಬದಲಿದಿದ್ದಾಗ್ಯೂ ಈಗ ಯುದ್ಧವು ವಿಶ್ವವ್ಯಾಪಿಯಾಗಿ ಹಿಂದ ಬೂಮಿಯ ಒ ಗಿಲಿಗೆ ಬಂದು ತಲ್ಲಿದ್ದರಿಂದ ಉಂಟಾದ ಜಾಗತಿಕ ಪರಿಸ್ಥಿತಿಯನ್ನು ಮಂಡಳವು ಲಕ್ಷದಲ್ಲಿ ತಕ್ಕೊಳ್ಳಬೇಕಾಗಿದೆ ರಾಷ್ಟ್ರೀಯ ಸಭೆಯ ಸಹಾನುಭೂತಿಯು ಹೆರರ ದಾಳಿಗೀಡಾಗಿ ತಮ್ಮ ಸ್ವಾತಂತ್ರ್ಯ ಕಾಪಾಡಿಕೊಳ್ಳಲು ಚೀನಾಡುವ ಜನಾಂಗಗಳ ಕಡೆಗೆ ಇರುವದು ಸಹಜವೇ ಆದರೆ ಸಂಪೂರ್ಣ ಸ್ವತಂತ್ರವಾಗಿರುವ ಭಾರತವೆಯೇ ರಾಷ್ಟ್ರಸಂರಕ್ಷಣೆಯ ಭಾರವನ್ನು ಕೈಕೊಳ್ಳಲಿಕ್ಕೂ, ಈ ಯುದ್ಧದ ಬಿರುಗಾಳಿಯಲ್ಲಿ ಉದ್ದೂತವಾಗುವ ಮಹಾ ಕಾರ್ಯವನ್ನು ಮಂಡುವರಿಯಲು ನೆರವಾಗಲಿಕ್ಕೂ ಸಮರ್ಥವ ದೀತೆಂಬ ಮಾತನ್ನು ಮರೆಮಾಚಬರುವಂತಿಲ್ಲ ಈಗ ಸಮಸ್ತ ಭಾರತೀಯರು ಬ್ರಿಟಿಶ ಸರಕಾರದ ಬಗ್ಗೆ ಅಪನಂಬಿಗೆಯುಳ್ಳವರಾಗಿದ್ದಾರೆ ಬ್ರಿಟಿಶ ಸರಕಾರದವರು ಎಸ್ಟೇ ಒತ್ತೂತ್ತಿ ಅಭಿನಚ ನೆಗಳನ್ನಿತ್ತರೂ ಅವುಗಳಿಂದ ಈ ಪರಿಸ್ಥಿತಿ ಬದಲಾಗುವಂತಿಲ್ಲ ಗರ್ವಿಷ್ಠ ಸಾಮ್ರಾಜ್ಯವಾದವೂ ಪೆಸಿಸ್ಟರ ನವ ಧಿಕಾರಿತ್ವವೂ ಭಾರತೀಯರ ದೃಷ್ಟಿಯಿಂದ ಒಂದೇ ರೂಪದವಾಗಿರುವದರಿಂದ ದ ಪ್ಯಕ್ಕೂಲಿಲೆಗಳಿಂದ ಪರಿಶುದ್ಧವಾದ ಭಾರತವು ಸಾಮ್ರಾಜ್ಯವಾದಿ ಗಳಿಗೆ ಸ್ವಯ ಪ್ರೇರಣೆಯಿಂದಾಗಲಿ ಸಂತೋಷದಿಂದಾಗಲಿ ಎಂದೆಂದೂ ಸಹಾಯ ಮಾಡುವಂತಿಲ್ಲ ಆದ್ದರಿಂದ ತಾ ೧೫-೧೪೧೦ನೇಗೆ ಮುಂಬಯಿಯಲ್ಲಿ ನೆಸಿದ ಅ ಭಾ ಕೊಂ ಸಮಿತಿಯವರು ಮಾಡಿದ ನಿರ್ಣಯವು ಇನ್ನೂ ಊರ್ಜಿತವಿರುತ್ತದೆಂಕೂಡ ಅವರಲ್ಲಡಕವಾದ ನೀತಿಯೇ ಇಂದಿನ ಕೊಂಗ್ರೆಸ್ಸಿನ ನೀತಿಯಾಗಿರುತ್ತದೆಂತಲೂ ಮಂಡಳವು ಅಭಿಪ್ರಾಯಪಡುತ್ತಿದೆ

ಇನ್ನಿತರ ಗೊತ್ತುವಳಿಗಳು
ಚೀನಾ ಮತ್ತು ರುಶ್ಯ ಜಾಂಥವರೊಡನೆ ಸಹಾನುಭೂತಿ

ರಕ್ಷಣಾ ವಾನವ ಜಾತಿಯ ಪ್ರಗತಿಗೆ ಸಹಾಯಕವಾಗಿರುವ ಮಾಪ್ತಸೂಚಿಗಳ ತತ್ವಗಳ ಬಗ್ಗೆ ಕಾರ್ಯಾಚರಣೆ ತ್ರಿದ್ದಾರೆ ಜಪಾನ ಈ ಯೋಚನೆಯ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕೆಂದು ಬೆಂಕಿಯಲ್ಲಿ ಸುಟ್ಟು ಬೂದಿಯಾದರೆ ಫೋಗ ಅನರ್ಥವಂಭವಿಸಿದೆ ಮುಂಡಳ ಸ್ವತಂತ್ರತೆಯ ರಕ್ಷಣೆಗಾಗಿ ಮಾಡಿದ ತಿಲು ಸ್ವಾರ್ಪತ್ಯಾಗದಲೂ ರಾಜಂಗಲ್ಲಿ ತೋರಿಸಿದ ಉತ್ಸಾಹವನ್ನು ಮೆಚ್ಚಿ ಅಭಿನಂದಿಸಿದೆ ಮತ್ತು ಯುದ್ಧ ಕಾರ್ಯ ಪ್ರಯತ್ನಗಳಲ್ಲಿ ಅವರು ಧೈರ್ಯ, ಬ ಗಿ ಅವರನ್ನು ಮೆಚ್ಚಿಕೊಂಡಿದೆ

ಮನದಣಿ ಹರಸುತ್ತಿದೆ ಅದೇ ಮೇರೆಗೆ ೪॥ ವರ್ಷ ಗಳಿಂದಲೂ ರಣಭೂಮಿಯಲ್ಲಿ ವಿಕ್ಷಿಪ್ತಿಯಿಂದ ಹೋರಾಡಿ ಆಸುಪಸೀಯ ಶತ್ರಾಕ್ರಮಣ ಉಪಾತ ರಿಗೆ ಹಾಕಿಕೊಟ್ಟಿರುವ ಚೀನಿ ಬಾಂಧವರನ್ನೂ ಹೃತ್ಪೂರ್ವಕ ಅಭಿನಂದಿಸುತ್ತಿದೆ

ಮಲಯ, ಬ್ರಹ್ಮದೇಶ, ಈಸ್ಟ್ ಇಂಡೀಸ್‌ಗಳ ಬಗ್ಗೂ ಸಹಾನುಭೂತಿ

ಮಹತ್ವಾಕಾಂಕ್ಷೆಯುಳ್ಳ ಮತ್ತು ಆಕ್ರಮಣಶೀಲ ರಾಷ್ಟ್ರ ಗಳ ಕಾಡಾಟದಲ್ಲಿ ಸಿಲುಕಿ ಬಹು ಕಡುತರವಾದ ಕಷ್ಟ ನಷ್ಟಗಳಿಗೆ ಗುರಿಯಾಗಿರುವ ಮಲಯಾ, ಬ್ರಹ್ಮ ದೇಶ ಮತ್ತು ಈಸ್ಟ್ ಇಂಡೀಸ್‌ಗಳ ಜನರ ಬಗ್ಗೂ ವಿಶೇಷವಾಗಿ ಅಲ್ಲಿನ ನೆಲಸಿರುವ ಭಾರತೀಯರ ಬಗ್ಗೆ— ಹಿಂದೀ ರಾಷ್ಟ್ರೀಯ ಸಭೆಯು ಸಹಾನುಭೂತಿಯನ್ನು ವ್ಯಕ್ತಗೊಳಿಸುತ್ತಿದೆ ವಿದೇಶಗಳಲ್ಲಿರುವ ತನ್ನ ಮಕ್ಕ ಳನ್ನು ಹಿಂದಮಾತೆಯು ಎಂದೂ ಮರೆಯುವಂತಿಲ್ಲ ಹೊಸ ಬಗೆಯ ಕಷ್ಟಗಳು ಬಂದಾಗ ಭರವಸೆ ಸಹಾ ಯದಿಂದ ದುಡಿದು ಅವರು ಕಷ್ಟನಿವಾರಣ ಮಾಡಿ ಕೊಳ್ಳಬೇಕಾಗಿ ಮಂಡಳವು ಸಲಹೆ ಕೊಡುತ್ತಿದೆ

ಮಹಾತ್ಮರ ರಿಜಿನಾಮೆಯ ಸ್ವೀಕಾರ

ಅಹಿಂಸೆಯ ವ್ಯಾಪ್ತಿಯ ಕುರಿತು ತಮಗೂ ಮಂಡ ಳದ ಸದಸ್ಯರಿಗೂ ಉಂಟಾದ ಮತಭೇದವನ್ನು ಅನು ಲಕ್ಷಿಸಿ, ತಮಗೆ ರಾಷ್ಟ್ರೀಯ ಸಭೆಯ ಧುರೀಣತ್ವದ ಹೊಣೆಯಿಂದ ಮುಕ್ತ ಮಾಡಬೇಕಾಗಿ ಮಹಾತ್ಮರು ರಾಷ್ಟ್ರಪತಿ ಮೌಲಾನಾ ಅಬುಲ್ ಕಲಾಮ್ ಆಜಾದ್ ರವರಿಗೆ ಒಂದು ಪತ್ರ ಬರೆದಿದ್ದರು ಆ ಪತ್ರದಲ್ಲಿ ವ ಹಾತ್ಮರು ಬರೆಯುತ್ತಾರೆ- 'ಅಹಿಂಸೆಯೇ ಹಿಂದು ಸ್ಥಾನವನ್ನೂ ಜಗತ್ತನ್ನೂ ಆತ್ಮನಿಂದ ಗರ್ವದಿಂದ ಕಾಪಾಡಬಲ್ಲದೆಂದು ನನ್ನ ನಿಶ್ಚಿತಾಭಿಪ್ರಾಯ ಆದ್ದ ರಿಂದ ನನ್ನ ಕಾರ್ಯವನ್ನು ನಾನು ಮುಂದರಿಸಲೇ ಬೇಕಾಗಿದೆ ಆ ಕಾರ್ಯದಲ್ಲಿ ನನಗೆ ಬೇಕಾದರೆ ಯಾವ ಸಂಸ್ಥೆಯಾಗಿಲಿ ವ್ಯತ್ಯಿಗಳಾಗಿಲಿ ನೆರವಾಗಲಿ ಯಾ ಬಿಡಲಿ ಆದ್ದರಿಂದ ತಮ್ಮ ಮುಂಬಯಿ ತೀರ್ಮಾ ನದಂತೆ ನನ್ನ ಮೇಲೆ ಹೇರಲ್ಪಟ್ಟ ಹೊಣೆಯಿಂದ ನನ್ನ ನು ಮುಕ್ತಮಾಡಬೇಕಾಗಿ ನನ್ನ ಅರಿಕೆಯಿದೆ ಎಲ್ಲ ಯುದ್ಧಗಳ ನಿಷೇಧೆ ಮಾಡುವ ವಾಕ್-ಸ್ವಾತಂ ತ್ರ್ಯಕ್ಕಾಗಿ, ನನ್ನ ಅಹಿಂಸಾ ಶಕ್ತಿಯಲ್ಲಿ ವಿಶ್ವಾಸವುಳ್ಳ ಮತ್ತು ನಾನು ಹಾಕಿಕೊಟ್ಟ ಕಠಾರುಗಳಂತೆ ನಡೆ ಯಲೊಪ್ಪುವ ಕೊಂಗ್ರೆಸ ಜನರ ಇಲ್ಲಿನ ಇತರರ ಸಹಾಯದಿಂದ ನಾನು ಸತ್ಯಾಗ್ರಹ ಸಮರವನ್ನು ಮುಂದರಿಸಿದರೆಲಾರೆನು ನಾನು ಒಲಿದ ಜನರ ಸತ್ಯಾಗ್ರಹ ಮಾಡುವರು ಆದರೆ ತಮ್ಮ ತಮ್ಮ ಪ್ರದೇ ಶಗಳಲ್ಲಾಲಿದು ಜನರಿಗೆ ಧೈರ್ಯ ಹೇಳಲಿಕ್ಕೆ ಇಲ್ಲಿನ ಸಹಾ ಯ ಮಾಡಲಿಕ್ಕೆ ಬೇಕಾದ ಜನರಿಗೆ ನಾನು ಎಂದೂ ಸತ್ಯಾಗ್ರಹ ಮಾಡಲು ಅಪ್ಪಣೆ ಕೊಡಲಿಕ್ಕಿಲ್ಲ "

ಕಾರ್ಯಕಾರಿ ಮಂಡಳವು ಮಹಾತ್ಮರ ಬೇಡಿಕೆ ಯನ್ನು ಮನ್ನಿಸಿ, ಅವರನ್ನು ರಾಷ್ಟ್ರಸಭೆಯ ನೈತೃತ್ವ ದಿಂದ ಬಿಡುಗಡೆ ಮಾಡುವಂಗ ರಾಷ್ಟ್ರ ಸ್ವಾತಂತ್ರ್ಯದ ಸಂಪಾದನೆಯ ಬ್ಯಾಗಿ ಮಹಾ ತ್ಮರು ತೋರಿಸಿ ಕೊಟ್ಟಿರುವ ಅಹಿಂಸಾ ಮಾರ್ಗದ ಮೇಲೆ ರಾಷ್ಟ್ರೀಯ ಸಭೆಗೆ ಅಚಲ ವಿಶ್ವಾಸವಿರು ದೆಂತಲೂ, ಆ ಮಾರ್ಗವನ್ನು ಅದು ಎಂದೂ ಬಿಟ್ಟು ಕೊಡಲಿಕ್ಕಿಲ್ಲೆಂತಲೂ ಮಹಾತ್ಮರಿಗೆ ಆಶ್ವಾಸನೆ ಕೊಟ್ಟಿನೆ ಹಾಗೂ ಸ್ವತಂತ್ರ ಭಾರತವು ಅಹಿಂಸೆಯ ಸಾಸನೆಯನ್ನು ಶಕ್ತಿವಿದ್ದ ಮಟ್ಟಿಗೆ ವಿಕ್ತರಿಸಿಯೇ ತೀರುವದೆಂದು ನಂಬಿಗೆ ಕೊಟ್ಟಿದೆ ಮಹಾತ್ಮರ ಕಾರ್ಯಕ್ಕೆ ಸಂಪೂರ್ಣ ಸಹಾಯ ಮಾಡಲಿಕ್ಕಾ ಗಿ ಅವರ್ಹ ಸಮ್ಮತಿ ಪಕ್ಕೆರೆ ಸತ್ಯಾಗ್ರಹವನ್ನ ಚಲಿಸ ಲಿಕ್ಕೂ ಕೂಡ ಮಂಡಳವು ಕೊಂಗ್ರೆಸ ಭಕ್ತರಿಗೆ ಅಪ್ಪ ಣೆ ಕೊಟ್ಟಿದೆ

ಗಂಡಾಂತರ ಬಂದಾಗ ಕೊಂಗ್ರೆಸ ಜನರು ಹೇಗೆ ವರ್ತಿಸಬೇಕು ?

ಮೇಲಿನ ಶ್ರೇಷ್ಠಯನ್ನು ಅನುಲಕ್ಷಿಸಿ ಕಾರ್ಯಕಾರಿ ಮಂಡಳವು ಒಂದು ಪ್ರಕಟನೆಯನ್ನು ಹೊರಡಿಸಿದೆ ಅದರ ಸಾರಾಂಶ ಇಂತಿದೆ —

ಯುದ್ಧವಾಗಿ ಹಿಂದ-ಭೂಮಿಯ ಗಡಿನಾಡು ಗಳ ಕನಕ ಟ್ಟಿಂದು ಮುಟ್ಟಿದೆ ಅದರಿಂದ ಹಲ ಕೆಲವು ಭಾಗಗಳಲ್ಲಿ ಆಂತರಿಕ ಅವ್ಯವಸ್ಥೆಯುಂಟುಗುವ ಭೀತಿಯುಂಟು ' ಕೆಲವು ನಗರಗಳ ಮೇಲೆ ವೈಮಾನಿಕ ದಾಳಿಯಾದೀತು ಅಂತಹ ಸಂಕಟಗಳು ಬಂದ ಗ ಶಾಂತ ರೀತಿಯಿಂದ ಉಳಿದು ಜನರು ಪರಿಸ್ಥಿತಿಯನ್ನು ಎದುರಿಸಿ ಮಾರ್ಗ ಕೊಂಗ್ರೆಸ ಜನರು ತಮ್ಮ ತಮ್ಮ ಸ್ಥಾನಗಳ ಲ್ಲುಳಿದು ನೆರವು ಬೇಕಾದವರಿಗೆ ನೆರವು ಕೊಡಬೇಕು, ಸಹಾಯ ಬೇಕಾದವರಿಗೆ ಸಹಾಯ ಮಾಡಬೇಕು ಕೊಂಗ್ರೆಸ ಸಂಸ್ಥೆಗೂ ಕೊಂಗ್ರೆಸ್ಸಿಗರೂ ಕಿತ್ತಿಸಿಂಪ ವರ್ತಿಸಿ ಜನರಲ್ಲಿ ವಿಶ್ವಾಸವನ್ನುಂಟು ಮಾಡಿದರ ಮಾತ್ರ ಮುಂಬರುವ ಸಂಕಟ ಸಮಯದಲ್ಲಿ ಅವ ರಿಂದ ಜನರಿಗೆ ಸಹಾಯವಾಗಬಲ್ಲದ ಆದ್ದರಿಂದ ಎಲ್ಲ ಕೊಂಗ್ರೆಸ ಸಂಸ್ಥೆಗಳು ಕೂಡಲೇ ತಮ್ಮನ್ನು ಬಲಪಡಿಸಿಕೊಂಡು ಹಳ್ಳಿಗಳ ಹೊಗೂ ಪಟ್ಟಣಗಳ ಜನರೊಡನೆ ನಿಕಟ ಆಸ್ಥತ್ವ ಬೆಳಸಿಕೊಳ್ಳುವ ಕೆಲಸ ವನ್ನು ಕೈಕೊಳ್ಳಬೇಕು ಪ್ರತಿಯೊಂದು ಹಳ್ಳಿಗೂ ಕೊಂಗ್ರೆಸ ಸಂದೇಶವನ್ನು ಎಲ್ಲಿಸಿ ಮುಂದೂಡುವ ಸಂಕಟಿಕ್ಕೆ ಇದಿರಾಗಲು ಅದನ್ನು ಸಿದ್ಧಗೊಳಿ ಬೇಕು

ಈ ಕಾರ್ಯಕ್ಕೆ ಮಹಾತ್ಮರ ವಿಧಾಯಕ ಕಾರ್ಯ ಕ್ರಮ ಬಹಳ ಉಪಯುಕ್ತವಿದೆ ಈ ಕಾರ್ಯಕ್ರಮ ದಿಂದ ಜನರಲ್ಲಿ ಒಕ್ಕಟ್ಟುಂಟಾಗುತ್ತಿದೆ, ಹಿಂದುಳಿದ ಸಮಾಜಗಳೊಡನಿನ ಕುಂದು ಕೊರತೆಗಳು ದೂರವಾ ಗುತ್ತಿವೆ, ಜನತೆಗೆ ಆತ್ಮವಿಶ್ವಾಸವಿದಿಂದಲೂ ಪರಸ್ಪರ ಸಹಕಾರದಿಂದಲೂ ವರ್ತಿಸಲು ಕಲಿಸಿಬರುತ್ತಿದೆ ಜನರ ಉತ್ಪಾದನೆಯನ್ನು ಹೆಚ್ಚಿಸಿ, ಅವನ್ನು ಸರಿಯಾಗಿ ಹಂಚಿಹಾಕಿದರೆಸ್ತಿದೆ ಇಷ್ಟೆಲ್ಲ ಈ ಕಾರ್ಯಕ್ರಮವು ಜನತೆಯೊಡನೆ ಸಂಬಂಧ ಬೆಳಸಿಕೊಡುಗು ಅವರ ವಿಶ್ವಾಸ ಸಂಪಾದಿಸಲು ಕಾರ್ಯಕರ್ತರಿಗೆ ಉತ್ತಮ ಸಂಧಿಯನ್ನು ಒದಗಿಸಿ ಕೊಡುತ್ತಿದೆ ಆದ್ದರಿಂದ ವಿಧಾಯಕ ಕಾರ್ಯಕ್ರಮವನ್ನು ಒತ್ತರದಿಂದ ಸಾಗಿ ಸಿ ಜನರಲ್ಲಿ ಧೈರ್ಯವನ್ನುಂಟುಮಾಡಲಿಕ್ಕೆ ಮಂಡ ಳವು ಎಲ್ಲ ಕೊಂಗ್ರೆಸ ಸಂಸ್ಥೆಗಳಿಗೂ ಕಾರ್ಯಕರ್ತ ರಿಗೂ ಆಜ್ಞಾಪಿಸುತ್ತಿದೆ ಇಂತಹ ಕಂಟಿದ್ದಿಗ ಸಮಾಜ ಪಾತಕಿ ಜನರು ಗೂಂಡಲವನ್ನೆಬ್ಬಿಸುವ ಛೇಷ್ಟೆಯಿಬೆ ಅದೆಕ್ಕೆದಿರುಗಳು ಹಳ್ಳಿಗಳಲ್ಲೂ ನಗರಗಳಲ್ಲೂ ಸ್ವಯಂಸೇವಕರನ್ನು ಸಂಘಟಿಸಬೇಕು ಸ್ವಯಂಸೇವಕರು ಪೂರ್ಣ ಅಹಿಂಸೆಯಿಂದಲೇ ವರ್ತಿಸತಕ್ಕದ್ದು ರಾಷ್ಟ್ರೀಯ ಸಭೆಯು ಅಹಿಂಸಯ ಮಾರ್ಗವನ್ನು ಬಿಟ್ಟುಕೊಟ್ಟಿಲ್ಲಂಬ ಮಾತನ್ನು ಅವರು ಎಂದೂ ಮರೆಯಿಬಾರದು ಸ ಮಾಜ ಕಂಟಕರಲ್ಲೂ ಗಂಡಾಂತರದ ಕಾಲದಲ್ಲೂ ಒಸ ಸಾನಿಮಾಡುವದೇ ಈ ಸ್ವಯಂಸೇವಕರ ಕರ್ತ ವ್ಯ ದ್ವಾರಿಂದ ಅಧಿಕಾರಿಗಳೊಡನೆ ಅವರು ಜಗಳವಾಡ ಕೂಡದು

ಧಾರಣೆಗಳ ವಿರಾಟವೂ ಜೀವನ-ವಸ್ತುಗಳ ಕೊರತೆಯೂ

ಧಾನ್ಯ ದವಸ ಮುಂತಾದವುಗಳ ಧಾರಣೆಗಳು ಈಗಾಗಲೇ ಏರುವ ಅದರಿಂದ ಜನರು ಚಿಂತಾಗ್ರಸ್ತ ರಾಗಿದ್ದಾರೆ ಅಧಿಕಾರಿಗಳು ಈ ಬಗ್ಗೆ ಉಪಾಯ ಯೋಜನೆ ಮಾಡಿದ್ದು ಕಂಡುಬರುವಲ್ಲಿ ಧಾರಣೆ ಗಳು ಇನ್ನೂ ಏರುವ ಸಂಭವವಿದೆ ವ್ಯಾಪಾರದಲ್ಲಿ ಗೊಂದಲವೂ ಮತ್ತು ಯುದ್ಧ ಕಾರ್ಯದ ಒತ್ತಡ ದಿಂದ ಸರಕುಗಳ ಅಮದು ರಫ್ತುಗಳಿಗೆ ತಡೆಯುಂಟಾ ಗಿ ಜೀವನಕ್ಕೆ ಅವಶ್ಯವುಳ್ಳ ಮತ್ತು ನಿತ್ಯೋಪಯೋಗಿ ಜನಸರಗಳ ಕೊರತೆಯುಂಟಾಗಬಹುದು ವಿದೇಶ ಗಳಲ್ಲಿ ಯುದ್ಧಕಾರ್ಯಾರ್ಥಿ ದೊಡ್ಡ ದೊಡ್ಡ ಉದ್ದಿ ಮೆಗಳು ನಿಂತು ಹೋಗಿವೆ, ಸರಕುಗಳ ಆಯಾತವೂ ನಿಂತು ಹೋಗಿದೆ

ಇಂತಹದೇ ಪರಿಸ್ಥಿತಿಯಲ್ಲಿ ಚೀನಾ ರಾಷ್ಟ್ರದವರು ಹಳ್ಳಿಗಳಲ್ಲಿ ಉದ್ಯೋಗಗಳನ್ನು ಹೊರಡಿಸಿ ಬಂದ ಸಂಕಟವನ್ನು ನಿವಾರಿಸಿಕೊಂಡಿದ್ದಾರೆ ಹಿಂದುಸ್ಥಾನ ದಲ್ಲೂ ಇಂತಹ ಸಮಸ್ಯೆಯುದ್ಭವಿಸಿ, ಹಳ್ಳಿಯ ಉದ್ಧಿಮೆ ಕೈಗಾರಿಕೆಗಳಿಗೆ ಉದ್ಯವಕಾಲ ಬಂದೊದ ಗಬಹುದು ಈ ಕೈಗಾರಿಕೆಗಳಿಗೆ ವ್ಯಾಪಾರದ ತೊಡ ಕೂ ಇಲ್ಲ, ಆಯಾತ ನಿರ್ಯಾತದ ಅಡಚಣಿಯೂ ಇಲ್ಲ ಆದ್ದರಿಂದ ವಿಧಾಯಕ ಕಾರ್ಯಕ್ರಮದೊಳ ಗಿನ ಈ ಅಂಗವನ್ನು ಉತ್ಸಾಹದಿಂದಲೂ ತಾತ್ಕರ್ಯ ದಿಂದಲೂ ಪುರಸ್ಕರಿಸಿ, ಹಳ್ಳಿಗರಿಗೆ ಅವಶ್ಯವೇತಾಗುವ ಜೀನಸುಗಳನ್ನು ಆಯಾ ಹಳ್ಳಿಗಳಲ್ಲಿಯೇ ಹುಟ್ಟುವಳಿ ಮಾಡುವ ನೈಪಕ್ಷ ಮಾಡುವದೊಳಿತು ಆದ್ದರಿಂದ ಎಲ್ಲ ಹಳ್ಳಿಗರು ತಮಗೆ ಬೇಕಾದ ಅನ್ನಸಂಪಗ್ರಿ ಗಳನ್ನಾದರೂ ತಮ್ಮಲ್ಲಿಯೇ ಬೆಳಸಿಕೊಳ್ಳಬೇಕೆಂದು ಸಮಸ್ತ ಹಳ್ಳಿ ಬಾಂಧವರಿಗೆ ಮಂಡಳವು ಸೂಚಿಸು ತ್ತಿದೆ, ಹಾಗೂ ಒಳಭದ ಅರಿಕೆಯಿಂದ ಸರಕುಗಳನ್ನು ದಾಸ್ತಾನ ಮಾಡದೆ ಅವನ್ನು ಯೋಗ್ಯ ಬೆಲೆಗೆ ಮಾ ರಾಟ ಮಾಡಬೇಕಾಗಿ ವರ್ತಕರಿಗೆ ವಿಜ್ಞಾಪಿಸುತ್ತಿದೆ ಸ್ವಸ್ಥಕಾಲದಲ್ಲಿ ವಿತ್ತ-ಜೀವಿತಗಳ ರಕ್ಷಣೆಯ ಬಗ್ಗೆ ಇಲ್ಲಿನ ಸಾರ್ವಜನಿಕ ಸುರಕ್ಷಿತತೆಯ ಒಗ್ಗೆ ಅಧಿಕಾ ಗಳು ವಿನಾವೂ ಅಪ್ಪಣೆಗಳನ್ನು ಹೊರಡಿಸಿದ ಅಂಥ ಅಪ್ಪಣೆಗಳು ಕೊಂಗ್ರೆಸ ಸೂಚನೆಗೆ ವಿರುದ್ಧವಿರುತ್ತವೆಂದು ಕಂಡುಬಂದಕಡೆ ಕೊಂಗ್ರೆಸ ಭಕ್ತರು ಅವನ್ನು ಕಡೆಗಣಿಸಿ ನಡೆಯಬಾರದು

ಆ! ಘಾ! ಕೊ! ಸಮಿತಿಯ ಸಭೆ

ಇದೇ ಬರುವ ತಾ ೧೫ನೇ ವರ್ಧಾದಲ್ಲಿ ಕೂಡ ವೆರು ವಿರ್ಧ ಪ್ರಾಂತದ ಜನರು ಈ ಬಗ್ಗೆ ಒಂದ ಸ್ವಾತ ಸವಿ ತಿಯನ್ನು ನೇಮಿಸಿ ಎಲ್ಲಿ ಸಿದ್ಧ ಗೊಳ್ಳು ಮಾಡತೊಡಗಿದ್ದಾರೆ ಸಮಿತಿಯ ಸ ಸರಲು ದಿವಂತಿ ನರೇಂದರು ಪಿ! ಅಳ್ಳಂಕರರು ಕೆ ರನ್ನು ಇಟ್ಟು ವಿಶಾಲವಾದ ಅಳ್ಳಂಕರ ನಗರವೆಂಬ ಮಂಟಪವನ್ನು ತಯಾರಿಸಿದ್ದಾರೆ ಮಹಾತ್ಮರಾ ನಾಮೆ ಮತ್ತು ಬಾರ್ಡೋಲಿಯ ಗೆತ್ತುವಳಿಗ ಮೇಲೆ ಸಭೆಯಲ್ಲಿ ವಿಕ್ಷಪ ಚರ್ಚೆಯಾಗು ಸಂಭವವುಂಟು

ಕಾನಡಾವೃತ್ತ.

ಮಿತಿ ಸೃಷ ಸಂವತ್ಸರ ಪುಷ್ಯ ಕೃಷ್ಣ ೩೧, ಸೋಮವಾರ

ಸಾಮ್ರಾಜ್ಯವಾದಕ್ಕೆ ಅಳಿಗಾಲ.

In any event the British Raj is disappearing whether Wells countrymen like it or not and nothing in the world can keep it functioning much longer

— Pandit Jawaharlal's statement (30 12 1941).

ಈವಾಗ ಸಾಮ್ರಾಜ್ಯವಾದಕ್ಕೆ ಅಳಿಗಾಲ ಪ್ರಾಪ್ತವಾಗಿದೆಯೆಂದು ಸ್ಪಷ್ಟವಾಗಿ ಕಂಡುಬರುತ್ತಿದೆ. ಲೋಕ ಘಟನೆಗಳು ಆ ಧ್ಯೇಯವನ್ನೇ ಗುರಿಯಾಗಿಟ್ಟುಕೊಂಡು ರೂಪುಗೊಳ್ಳುತ್ತಿವೆ ಯುದ್ಧ ಪರಿಸ್ಥಿತಿಯು ದಿನ ಹೋದ ಹಾಗೆ ಗಡಚಾಗಹತ್ತಿದೆ ಬ್ರಹ್ಮದೇಶದ ರಂಗೂನ ಪಟ್ಟಣ ಈವಾಗ ಸಂಕಟಗ್ರಸ್ತವಾಗಿದೆ, ಮಲಯದೇಶದ ಸಿಂಗಾಪೂರ ಯುದ್ಧಸಂಕಟದ ಪಡಿನೆಳಲು ಬಿದ್ದಿದೆ; ಅದೇ ಪ್ರಕಾರ ದಕ್ಷಿಣ ಸಾಕ್ಷರ್‌ದ ಮಧ್ಯಾಸದ ಲ್ಲೂ ಜನಸಾಮಾನ್ಯರು ಚಂಚಲಮನಸ್ಕರಾಗಿದ್ದಾರೆ, ಮುಂಬಯಿ ಪಟ್ಟಣಕ್ಕೆ ಪ್ರತ್ಯಕ್ಷ ಸಂಕಟದ ಬಾಧೆ ಈವಾಗ ತೋರದಿದ್ದಾಗ್ಯೂ ಅರಿಗಾಳಿ ಬೀಸ ಹತ್ತಿದೆ! ರಾಷ್ಟ್ರೀಯ ಸಭೆಯ ಕಾರ್ಯಕಾರಿ ಮಂಡಳದವರು ಈಗಣ ಯುದ್ಧಸಂಕಟ ಸ್ಥಿತಿಯನ್ನು ಗಾಂಧಿಯವರ ತನಕ ಗಾಂಭೀರ್ಯದಿಂದ ಸಮಾಲೋಚಿಸಿ, ನಮ್ಮ ಹಿಂದುಸ್ಥಾನದ ಭೂಮಿಕೆಯನ್ನು ಸ್ವತಂತ್ರಗೊಳಿಸಿ ಸಾಮ್ರಾಜ್ಯಕರ್ತರಿಗೆ ಸನ್ಮಾರ್ಗದೋಧೆಯನ್ನು ಮಾಡಿದ ಬಗ್ಗೆ ನಾವು ಸಕಲ ರಾಷ್ಟ್ರನಾಯಕರನ್ನು ಅನನ್ಯಭಾವದಿಂದ ಹರುಕತ್ತಿನೆ ರಾಷ್ಟ್ರೀಯ ಸಭೆಗೆ ಅಹಿಂಸೆಯು ಬೇಕು, ಅಹಿಂಸೆಯ ತ್ಯಾಗ ಮಾಡಲು ರಾಷ್ಟ್ರೀಯ ಸಭೆಗೆ ಒಪ್ಪಿಗೆಯಿಲ್ಲ ಆದರೆ ಸುತ್ತು-ಮುತ್ತಲೂ ಹಿಂಸೆಯು ಲಜ್ಜೆಗೇಡಿಯಾಗಿ ಕುಣಿಯುತ್ತಿರುವಾಗ ನಿತಾಂತ ಅಹಿಂಸೆಯಿಂದ ರಾಷ್ಟ್ರಕಾರ್ಯ ಭಾಗವಾಗದಿದ್ದಲ್ಲಿ ಅಹಿಂಸೆಯ ತ್ಯಾಗ ಮಾಡಲಿಕ್ಕೂ ಆ ಬಗ್ಗೆ ಮಹಾತ್ಮರಿಂದ ಪ್ರಾಪ್ತವಾದ ಲೋಕನಾಯಕತ್ವವನ್ನು ದೂರಪಡಿಸಲಿಕ್ಕೂ ರಾಷ್ಟ್ರೀಯ ಸಭೆಯು ಸಿದ್ಧವಾಗಿದೆ ಸತ್ಯಾಗ್ರಹದ ಮೇಲೆ ರಾಷ್ಟ್ರೀಯ ಸಭೆಗೆ ಶ್ರದ್ಧೆಯುಂಟು ಮಹಾತ್ಮರ ನಾಯಕತ್ವದಲ್ಲಿ ಸತ್ಯಾಗ್ರಹವನ್ನು ಪುರಸ್ಕರಿಸಿ ಹಿಂದ ಜನಾಂಗಕ್ಕೆಲೋಕದಲ್ಲಿ ಗೌರವಪ್ರಾಪ್ತಮಾಡಿಕೊಟ್ಟ ಬಗ್ಗೆ ರಾಷ್ಟ್ರೀಯ ಸಭೆಯು ಮಹಾತ್ಮರನ್ನೂ ಮಹಾತ್ಮರಿಗೆ ಸಹಕಾರ ನೀಡಿದ ವೀರಾಲ ಹಿಂದ ಜನಾಂಗವನ್ನೂ ಕೊಂಡಾಡಿದ್ದು ಯಾದಾಯೋಗ್ಯವೇ ಸತ್ಯಾಗ್ರಹದಿಂದಲೇ ಹಿಂದ-ಜನಾಂಗಕ್ಕೆ ಮೋಕ್ಷ ಸಿಗುವದೆಂದು ರಾಷ್ಟ್ರೀಯ ಸಭೆಗೆ ನಿತಾಂತ ಶ್ರದ್ಧೆಯುಂಟು ಅಂದ ಪರಾಕ್ರಮಶಾಲಿ ಸತ್ಯಾಗ್ರಹ ಕ್ರಮವನ್ನು ಸಹ ಶಿಖಿಸಲಿಕ್ಕೆ ರಾಷ್ಟ್ರೀಯ ಸಭೆಯು ಈವಾಗ ಒಡಂಬಡುತ್ತದೆ ಕಾರ್ಯಸಾಧನೆಗಾಗಿ ರಾಷ್ಟ್ರೀಯ ಸಭೆಯು ಈ ತ್ಯಾಗವನ್ನು ಸೈರಿಸಲು ಸಿದ್ಧವುಂಟು ಸ್ವಾತಂತ್ರ್ಯವೇ ರಾಷ್ಟ್ರೀಯ ಸಭೆಯ ಧ್ಯೇಯು ಅಹಿಂಸೆ, ಸತ್ಯಾಗ್ರಹ, ಅಸಹಕಾರ ಇವೆಲ್ಲ ಸ್ವಾತಂತ್ರ್ಯ-ಸಾಧನೆಗಾಗಿ ಕೈಕೊಂಡ ಸಾಧನಗಳು ರಾಷ್ಟ್ರಸ್ವಾತಂತ್ರ್ಯಕ್ಕೆಈ ಸಾಧನಗಳಿಂದ ನ್ಯೂನತೆಕಾಣಿಸಿಕೊಂಡಲ್ಲಿ ಅವನ್ನು ತ್ಯಾಗ ಮಾಡಲಿಕ್ಕೆ ರಾಷ್ಟ್ರೀಯ ಸಭೆಯು ಸಿದ್ಧವಿದೆ ಯುದ್ಧ-ಯತ್ನವನ್ನು ಪುರಸ್ಕರಿಸಬಾರದೆಂದು ರಾಷ್ಟ್ರೀಯ ಸಭೆಯ ಆಂದೋಲನವಲ್ಲ ಸ್ವ-ಜನಾಂಗದ ಹೊಣೆಗಾರಿಕೆಯನ್ನು ಪರಸ್ಪರ ಬ್ರಿಟಿಕರ ಮೇಲೆ ಹೊರಿಸಿ ತಾನು ಅಲಿಪ್ತವಾಗಿರಲು ರಾಷ್ಟ್ರೀಯ ಸಭೆಯು ಒಡಂಬಡಿಕೆಯಲ್ಲಿಲ್ಲ.

ಆದರೆ ಸಾಮ್ರಾಜ್ಯವಾದಿಗಳು ಸಾಮ್ರಾಜ್ಯವಾದವನ್ನು ದೃಢಪಡಿಸಲು ಎಷ್ಟಕ್ಕೂ ಯತ್ನಿಸಿ ಸಫಲರಾದುದು ಲೋಕದೊಳಗೆ ಕ್ಯಾತಿಯುಂಟಾಗಪತ್ರಿದೆ.ನಿರಂಕುಶ ಪ್ರಭುಗಳೂ ಲೋಕಮುಲಿಗೆಗಾರರೂ ಮುಣ್ಣುಪಾಲಾಗುವ ಕಾಲವಿದು! ಸಾಮ್ರಾಜ್ಯವಾದಿಗಳು ಯುಗಧರ್ಮವನ್ನು ಪಾಲಿಸಬೇಕು ಹಿಂದುಸ್ಥಾನವು ಭೂಲೋಕದ ಒಂದು ಭಾಗ, ಒಂದು ಅಂಗ, ಭೂಲೋಕದ ಘಟನೆಗಳ ಸುಖ-ದುಃಖಗಳನ್ನು ಅನುಭವಿಸುವ ಒಂದು ಅವಯವ' ಭೂಲೋಕವೇ ಪ್ರತ್ಯೇಕ, ಆ ಲೋಕದ ಸುಖ ದುಃಖಗಳಿಗೆ ಕಾರಣವಾಗುವ ರೀತಿ-ನೀತಿ ಘಟನೆಗಳೇ ಪ್ರತ್ಯೇಕ, ಹಿಂದುಸ್ಥಾನವು ಅದೊಂದು ಪ್ರತ್ಯೇಕ ಜಗತ್ತು, ಸಾಮ್ರಾಜ್ಯವಾದಿ ಬ್ರಿಟಿಶರ ಸುಖಕ್ಕಾಗಿ ದೇವನಿರ್ಮಿತ ಪ್ರತ್ಯೇಕ ಲೋಕ; ಹೀಗೆ ಯಾರೂ ಎಣಿಸಲಾಗದು ಪಂ॥ ಜವಾಹರಲಾಲರಲ್ಲಿರುವ ಈ ಸಂಗತಿಯನ್ನು ನಾವಾಂಕಿತ ಪತ್ರಿಕೆಯಾದ ಲಂಡನಿನ 'ಟ್ರಿಬ್ಯೂನ್' ಕರ್ತರು ಸಹ ಒಪ್ಪುತ್ತಾರೆ ರಾಷ್ಟ್ರೀಯ ಸಭೆಯು ಸಾಮಾಜಿಕ ಕ್ರಾಂತಿಯನ್ನೇ ಸಾಧಿಸಬೇಕೆಂದಿದೆಯೆಂದು ಬ್ರಿಟಿಶರಿಗೆ ಅಸಹಕಾರ ಈ ಏರಿ ಲೋಕನಿಧ್ವನಿಯಾಗಿದೆ. ಬ್ರಿಟಿಶರಿಗೆ ಅಸಹಕಾರ ಜಯನಾಗಬೇಕಂದಾಗಲಿ, ಹಿಟ್ಲರನಿಗೆ ವಿಜಯವಾಗಬೇಕೆಂತಾಗಲಿ ರಾಷ್ಟ್ರೀಯ ಸಭೆಯ ಇಚ್ಛೆಯಿಲ್ಲ ಈ ಸದಿಚ್ಛೆಯ ಮೂಲಕವಾಗಿಯೇ ರಾಷ್ಟ್ರೀಯ ಸಭೆಯವರು ಸಾಮ್ರಾಜ್ಯಕರ್ತರ ಆಶ್ರಯವಲ್ಲಿ ಹಿಂದುಸ್ಥಾನದೊಳಗೆ ಪಡಯುವ ಯುದ್ಧಯತ್ನ ಕಾರ್ಯದಲ್ಲಿ ವಿಘ್ನಗಳನ್ನುಂಟು ಮಾಡಲು ಒಡಂಬಡುವವಲ್ಲಿ ಆದರೆ ಸ್ವತಃ ಯುದ್ಧಯತ್ನಕಾರ್ಯಕ್ಕೆ ತೊಡಗಬೇಕಾದರೆ ರಾಷ್ಟ್ರಸ್ವಾತಂತ್ರ್ಯದ ಆಭಿವಚನವನ್ನು ಹಿಂದ ಜನಾಂಗವು ಹಿಡಿದಿದೆ. ಇದಕ್ಕಾದರೂ ನಿತಾಂತ ಸ್ಪಾರ್ಧ ಮೂಲವಲ್ಲ. ಲೋಕೋಸಾಕರವನ್ನು ಸರೋಪಕಾರವನ್ನಾ ದಕ್ಷತೆಯಿಂದ ನಡಿಸಿ ವಿಶಾ ಉತ್ತರ ಕೊಟ್ಟಿದ್ದಾರೆ, ಹಿಂದುಲೋಕವನ್ನು ಸುಲಿದು ಸ್ವಾರ್ಥವನ್ನು ಸಾಧಿಸಬಯಸುವ ಸಾಮ್ರಾಜ್ಯವಾದಿಗಳೇ ಹಿಂದ-ಜನಾಂಗದ ಆಸಾಶ್ರತೆಯ ವಾದವನ್ನು ಹೊಡುತ್ತಾರೆ ಆದರೆ ಸಾಮ್ರಾಜ್ಯವಾದದ ಆಯುರ್ದಾಯ ಈಗ ಕ್ಷೀಣಿಕೊಂಡಿದೆ, ಅದಕ್ಕೇಗ ಅಳಿಗಾಲ ಪ್ರಾಪ್ತವಾಗಿದೆ, ಸ್ವರ್ಗದಿಂದ ಅಮೃತ ಕಲಶವನ್ನು ತಂದುಕೊಟ್ಟಾಗ್ಯೂ ಅದಿನ್ನು ಬಾಳುಳಿಯದು. ಇದನ್ನು ನೀವು ಎಲ್ಲರೂ ಅವರ ದೇಶ-ಬಂಧುಗಳೂ ತಿಳಿದಿರಬೇಕು

ಸಾಮ್ರಾಜ್ಯವಾದವನ್ನು ಬದುಕಿಸಲೆಳಸುವದು ಈವಾಗ ನಗೆಗೇಡಿತನವೇ ಸರಿ! ಹಿಂದುಸ್ಥಾನವು ಸಾಮ್ರಾಜ್ಯವಾದಿಗಳ ಮೋಹಜಾಲದಲ್ಲಿ ಇನ್ನು ಎಷ್ಟಕ್ಕೂ ಸಿಲುಕುವ ಹಾಗಿಲ್ಲ, ರಾಷ್ಟ್ರೀಯ ಸಭೆಯ ಮೂಲಕ ಯುದ್ಧಯತ್ನವನ್ನು ಬ್ರಿಟಿಶರು ಅಪೇಕ್ಷಿಸುತ್ತಿದ್ದರೆ ಸಾಮ್ರಾಜ್ಯವಾದಕ್ಕೆ ಧಾರೆಯೆರೆಯಬೇಕು ಆತ್ಮಸಂತೋಷದಿಂದ ಆದನ್ನು ತೊರೆದು ಲೋಕ-ಸ್ವಾತಂತ್ರ್ಯದ ಸಮರ-ಕಾರಣದಲ್ಲಿ ಮುಂದಾಗಬೇಕು ಅಂದರೆ ರಾಷ್ಟ್ರೀಯ ಸಭೆಯು ಬ್ರಿಟಿಶರ ಬೆಂಬಲಕ್ಕೆರುವದೆಂದು ಎಲ್ಲರೂ ತಿಳಿಯಬಹುದು. ರಾಷ್ಟ್ರ ಸ್ವಾತಂತ್ರ್ಯವನ್ನು ಸಾಮ್ರಾಜ್ಯವಾದಿಗಳು ಅರ್ಪಿಸಲೊಡಂಬಡದಿದ್ದರೆ ಹಿಂದುಸ್ಥಾನದ ಸಹಕಾರವನ್ನು ಅವರು ಎಂದಿಗೂ ಅಪೇಕ್ಷಿಸಲಾಗದು ಸಾಮ್ರಾಜ್ಯವಾದಿಗಳಿಗೆ ಆ ಸಹಕಾರ ಸಿಗದು ಕಾಲಧರ್ಮವನ್ನೂ ಮನುಷ್ಯಸ್ವಭಾವವನ್ನೂ ಸಾಮ್ರಾಜ್ಯವಾದಿಗಳು ಗ್ರಹಿಸತಕ್ಕದ್ದು ರಣದೇವಿಗೆ ಸಮಸ್ಯಾ ಪಾರ್ಶ್ವದಲ್ಲಿ ಉಗ್ರ ಕಳಿಯೇರಿದರೆ ಸಾಮ್ರಾಜ್ಯವಾದವು ಆಹುತಿ ಬೀಳಲೇ ಬೇಕಾಗುವದು. ಆ ಪ್ರಸಂಗವೇ ಈಗ ಘಟಿಸುತ್ತಿದೆ ಆ ಆಹುತಿಯನ್ನು ಪಡಕೊಂಡನಕ ರಣದೇವಿಯು ಶಾಂತವಾಗಳು. ಹಿಂದುಸ್ಥಾನವನ್ನು ಸಾಮ್ರಾಜ್ಯ ಕರ್ತರು ಇಂದಿನಂತೆ ಮುಂದೆಯೂ ಆಳಬಯಸುವದು ಮೂರ್ಖತನ. ಲೋಕವೆಲ್ಲ ಕ್ರಾಂತಿಯೊಳಗೆ ಸಿಲುಕಿ ಒಡಮೆಲಾಗುತ್ತಿರುವಾಗ ಹಿಂದ-ಜನಾಂಗದ ಸ್ಥಿತಿಯನ್ನು ಇದ್ದಂತೆ ಇರಗೊಡವದು ಯಾರಿಗೆ ತಾನೇ ಸಾಧ್ಯ? ಸಾಮ್ರಾಜ್ಯವಾದಕ್ಕೆ ಈ ಪರಿ ಕಾಲದೇ ವಿಪರೀತವಾಗಾಗ ಸಾಮ್ರಾಜ್ಯಕರ್ತರು ಮುಂಜಾಗ್ರತೆ ಪಡೆಯುವದೊಳಿತು. ರಾಷ್ಟ್ರೀಯ ಸಭೆಯವರು ಸಂಧಾನಕ್ಕೆ ಸಿದ್ಧರಿದ್ದಾರೆ, ಲೋಕ ಸ್ಪೇಮಕ್ಕಾಗಿ ಬ್ರಿಟಿಶರೂಡನೆ ಹೆಗ್ಗೆಯ್ಕೆಗೆ ನಡಿಸಲು ಸಂತೋಷದಿಂದ ಕೈ ನೀಡಿ ಮುಂದಾಗಿದ್ದಾರೆ ಇವನ್ನು ಸಾಮ್ರಾಜ್ಯ ಸರಕಾರದ ಮುಖಪತ್ರಿಕೆಯಾದ ಲಂಡನಿನ 'ಟೈಮ್ಸ್' ಕರ್ತರು ಸಹ ಒಪ್ಪುತ್ತಾರೆ ರಾಷ್ಟ್ರೀಯ ಸಭೆಯ ಪ್ರಾಮಾಣಿಕತನ ಈ ಏರಿ ಲೋಕನಿದ್ವನಿಯಾಗಿದೆ. ಬ್ರಿಟಿಶರಿಗೆ ಅಸಹಯಾನಾಗಬೇಕಂದಾಗಲಿ, ಹಿಟ್ಲರನಿಗೆ ವಿಜಯವಾಗಬೇಕೆಂತಾಗಲಿ ರಾಷ್ಟ್ರೀಯ ಸಭೆಯ ಇಚ್ಛೆಯಿಲ್ಲ ಈ ಸದಿಚ್ಛೆಯ ಮೂಲಕವಾಗಿಯೇ ರಾಷ್ಟ್ರೀಯ ಸಭೆಯವರು ಸಾಮ್ರಾಜ್ಯಕರ್ತರ ಆಶ್ರಯವಲ್ಲಿ ಹಿಂದುಸ್ಥಾನದೊಳಗೆ ಪಡಯುವ ಯುದ್ಧಯತ್ನ ಕಾರ್ಯದಲ್ಲಿ ವಿಘ್ನಗಳನ್ನುಂಟು ಮಾಡಲು ಒಡಂಬಡುವವಲ್ಲಿ ಆದರೆ ಸ್ವತಃ ಯುದ್ಧಯತ್ನಕಾರ್ಯಕ್ಕೆ ತೊಡಗಬೇಕಾದರೆ ರಾಷ್ಟ್ರಸ್ವಾತಂತ್ರ್ಯದ ಆಭಿವಚನವನ್ನು ಹಿಂದ ಜನಾಂಗವು ಹಿಡಿದಿದೆ. ಇದಕ್ಕಾದರೂ ನಿತಾಂತ ಸ್ಪಾರ್ಧ ಮೂಲವಲ್ಲ. ಲೋಕೋಸಾಕರವನ್ನು ಸರೋಪಕಾರವನ್ನಾ ದಕ್ಷತೆಯಿಂದ ನಡಿಸಿ ವಿಶಾ

ಲ ಭೂಮಂತರವೆ ಲೋಕಸ್ವಾತಂತ್ರ್ಯ-ಕಾರಣವನ್ನು ಕಡೆಗಾಣಿಸುವಷಕ್ಕಾಗಿ ಹಿಂದ-ಜನಾಂಗವು ರಾಷ್ಟ್ರ ಸ್ವಾತಂತ್ರ್ಯವನ್ನು ಸಾಮ್ರಾಜ್ಯವಾದಿಗಳ ಕಡೆಗೆ ಕೇಳುವ ನಿಗ್ರಹ ಹಿಡಿದಿದೆ. ಸಾರ್ವಜನಿಕವಾದಿಗಳು ಹಿಂದ-ಜನಾಂಗದ ವಿಶಾಲ ಭೂಮಿಕೆಯನ್ನು ಚಿಂತಿಸಿ ಅದನ್ನು ಪೂರ್ಣಪಡಿಸಬೇಕು.

ಹೀಗೆಯೇ ಮಾಡಬೇಕು, ಹಾಗೆಯೇ ಆಗಬೇಕು; ಹೀಗೆ ರಾಷ್ಟ್ರೀಯ ಸಭೆಯ ಅಂದೋಲನವಿಲ್ಲ ಸಾಮ್ರಾಜ್ಯವಾದವನ್ನು, ತಿರಸ್ಕರಿಸಿ ರಾಷ್ಟ್ರ ಸ್ವಾತಂತ್ರ್ಯವನ್ನು ಮನ್ನಿಸಿ ಸಾಮ್ರಾಜ್ಯಕರ್ತರು ಕಲ್ಪಿಸಿದ ರಾಜ್ಯಘಟನೆಯನ್ನು ಸ್ವೀಕರಿಸಲಿಕ್ಕೆ ಕೊಂಗ್ರೆಸ ಕಾರ್ಯಕಾರಿ ಮಂಡಳದ ಒಪ್ಪಿಗೆಯುಂಟು. ಯಾವ ದೊಂದು ಯೋಜನೆಯ ಬಗ್ಗೆ ರಾಷ್ಟ್ರೀಯ ಸಭೆಯ ಆಕ್ಷೇಪವಿಲ್ಲ ಅಚ್ಚುಕಟ್ಟಾದ ರಾಜ್ಯಯೋಜನೆಯನ್ನು ಈಗಲೇ ತಯಾರಿಸಿ ಅವನ್ನು ರೂಢಿಗೊಳಿಸಲು ಯುದ್ಧ ವ್ಯಗ್ರ ಬ್ರಿಟಿಶರಿಗೆ ರಾಷ್ಟ್ರೀಯ ಸಭೆಯವರು ಒತ್ತಾಯಪಡಿಸುವದಿಲ್ಲ. ಯುದ್ಧಕಾಲದಲ್ಲಿ ಯುದ್ಧಕಾಲಕ್ಕುಚಿತ ಮತ್ತು ಸ್ವತಂತ್ರ ಜನಾಂಗದಸ್ಥಾನಮಾನಗಳಿಗೆ ಪೋಷಕವಾಗುವಂಥ ತಾತ್ಕಾಲಿಕ ರಾಜ್ಯಯೋಜನೆಯನ್ನು ಸಾಮ್ರಾಜ್ಯಕರ್ತರು ಯೋಜಿಸುವಲ್ಲಿ ಸಕಲ ಸಹಾಯ-ಸಹಕಾರ-ಸಲಹೆಗಳನ್ನು ನೀಡಲಿಕ್ಕೆ ರಾಷ್ಟ್ರೀಯ ಸಭೆಯವರು ಒಗ್ಗಾಲಿನ ಮೇಲೆ ಸಿದ್ಧರಿದ್ದಾರೆ ಯುದ್ಧವನ್ನು ಜಯಿಸುವದಕ್ಕಾಗಿ ತರತರದ ಸಾಹಸಗಳನ್ನು ಕೈಕೊಳ್ಳುವ, ಪರಿಧರಿಯ ಯೋಜನೆಗಳನ್ನ ಕಲ್ಪಿಸುವ ಬ್ರಿಟಿಶ ಜನಾಂಗಕ್ಕೆ ಹಿಂದುಸ್ಥಾನದ ರಾಷ್ಟ್ರಸ್ವಾತಂತ್ರ್ಯವನ್ನು ಮನ್ನಿಸುವಂಥ ಯೋಜನೆಯನ್ನು ತಯಾರಿಸಬಹುದಾದಿಲ್ಲವಾಗಿ ನಾವೇನು ಎಣಿಸುವದಿಲ್ಲ ಲೋಕದೊಳಗಿಂದ ಕಲಹಕಾರಣಗಳನ್ನು ಸಮೂಲ ನಿರ್ಮೂಲಿಸಿ ಅಖಿಲ ಭೂತಳದಲ್ಲಿ ಲೋಕಕ್ಷೇಮಕಾರಕ ಶಾಂತತೆಯನ್ನು ದೃಢವಾಗಿ ಸ್ಥಾಪಿಸಿ ಭೂಲೋಕದ ರೂಪವನ್ನೇ ಅಮೂಲಾಗ್ರ ಸ್ಥಿತ್ಯಂತರಗೊಳಿಸಲು ಶಾಸನ ದಂಡವನ್ನು ಪುರಸ್ಕರಿಸುವ ಬ್ರಿಟಿಶ ಜನಾಂಗಕ್ಕೆ ಅದು ಅಸಾಧ್ಯವೆಂದು ನಾವು ತಿಳಿಯಲಾರೆವು ಸಾಮ್ರಾಜ್ಯವಾದಕ್ಕೆ ಅಳಿಗಾಲ ಬಂತೆಂದು ಪಂ॥ ಜವಾಹರ ಲಾಲರು ನಿರ್ಧಾರದಿಂದ ಸುಡಿದಂತೆ ಸಾಮ್ರಾಜ್ಯವಾದಿಗಳು ಮನಸೋಇಚ್ಛೆಯ ಮಾಡಿಕೊಳ್ಳಲಿ. ಅಂದರೆ ಎಲ್ಲವೂ ಸರಿಹೋಗುವದೆಂದು ನಾವು ಸಾಮ್ರಾಜ್ಯಕರ್ತರಿಗೆ ಈ ಮೂಲಕ ಕಿವಿಮಾತು ಹೇಳುತ್ತೇವೆ

—●—

ಸಿಂಗಾಪುರಕ್ಕೆ ಸರ್ಪಸುತ್ತು !

[ವಿರೀಕ್ಷಕನು ಬರೆದುದು.]

ಈಗ ನನಗೆ ಸಿಂಗಾಪುರದ್ದೇ ಧ್ಯಾನ. ಒಟ್ಟಾವಾದಲ್ಲಿ ಕೆನಡಾದೊಳಗಿನ ಲೋಕಸಭೆಯಲ್ಲಿ ಭಾಷಣ ಮಾಡುವಾಗ ಬ್ರಿಟಿಶ ಮುಖ್ಯ ಪ್ರಧಾನರಾದ ಮಿ॥ ಚರ್ಚಿಲ್ಲರು ನುಡಿದಂತೆ, ಬ್ರಿಟಿಶರು ಹೊಂಗೊಂಗ ಪಟ್ಟಣವನ್ನು ಕಾಪಾಡುವರೆಂದು ನನ್ನ ದೂ ಭಾವನೆಯಿತ್ತು; ಅದನ್ನು ಕಾಪಾಡಿಕೊಳ್ಳುವದು ಆತ್ಯವಶ್ಯವಾಗಿತ್ತು, ಆದರೆ ಮಿತ್ರಪಕ್ಷದವರ ದುರ್ವ್ಯವಹಾರದಿಂದ ಅದು ಬಿತ್ತು ! ಆದರೂ ಸಿಂಗಾಪುರವು ಜಪಾನದ ವಶವಾಗಲಿಕ್ಕಿಲ್ಲವೆಂದೂ ಜಪಾನಿಯರನ್ನು ಅದು ಪ್ರತಿಭಟಿಸಿ ಹಿಂಜರಿಸುವದೆಂದೂ ಚರ್ಚಿಲ್ಲ ಮಹಾಸ್ವಪ್ನಾನರು ಧೈರ್ಯದಿಂದ ಹೇಳುತ್ತಾರೆ. ಆದರಿಂದ ನನಗೊಳ್ಳೇ ಸಮಾಧಾನವಾಗಿದೆ! ಸಿಂಗಾಪುರದೊಳಗಿನ ಸಿದ್ಧತೆಗಳು ಭದ್ರವಾಗಿವೆಯೆಂದು ಲೋಕವೇ ಸಾರುತ್ತಿದೆ ಸಿಂಗಾಪುರ ದ್ವೀಪದ ಉದ್ದಗಲ ೩೫ ಮೈಲು, ಅಗಲಳತೆ ೧೪ಮೈಲು, ಸುಮಾರು ೩೫೦ ಚಿಜ್ಜ್ಯೂಕ ಮೈಲು ಕ್ಷೇತ್ರಫಲವುಂಟು. ಮಲಯಾ ದ್ವೀಪಕಲ್ಪಕ್ಕೂ ಸಿಂಗಾಪುರಕ್ಕೂ ನಡುವೆ ಮುಕ್ಕಾಲು ಮೈಲು ಅಗಲಳತೆಯ ಜೊಹೋರ ಸಾಮುದ್ರಧುಪ್ಪಿಯದೆ ಇವೆಕ್ಕೂಂದು ಸಂಕ ಕಟ್ಟಿ ಮಲಯಾ ಸಿಂಗಾಪುರಗಳು ಜೋಡಿಸಲ್ಪಟ್ಟಿವೆ ಸಿಂಗಾಪುರದ ಸುತ್ತಮುತ್ತು ಚಿಕ್ಕ-ಪುಟ್ಟ ಅನೇಕ ದ್ವೀಪಗಳಿವೆ ಇಂತಿ ಸಾಗರದಲ್ಲೂ ನನ್ನು ಹಿಂದೀ ಮಹಾಸಾಗರದಲ್ಲೂ ಸಿಂಗಾಪುರವು ಬ್ರಿಟನ - ಅಮೇರಿಕೆಯವರ ಹಿತ -ಬಂಧಗಳನ್ನು ರಕ್ಷಿಸುವ ಭವ್ಯ ಕೋಟಿ ಮಲಯಾದೊಳಗಿನ ಬ್ರಿಟಿಶ-ಅಮೇರಿಕೆಯವರ ಹಿತ ಸಂಬಂಧಗಳನ್ನು ಕಾಪಾಡಲಿಕ್ಕೆ ಸಿಂಗಾಪುರದ ಒಡೆತನವು ಅತಿ ಆವಶ್ಯ ಪೂರ್ವ ಪಾರ್ಶ್ವದಿಂದ ಹಡಗಗಳು ಸೇರಿದಂತೆ ಸಿಂಗಾಪುರದಲ್ಲಿ ಜಲಸುರಂಗಗಳು ಹೂಳಲ್ಪಟ್ಟಿವೆ. ಸೂರ್ಯಾಸ್ತದಿಂದ ಸೂರ್ಯೋದಯದವರೆಗೆ ರಾತ್ರಿಕಾಲದಲ್ಲಿ ಹಡಗಗಳು ಸಂಚರಿಸಕೂಡದೆಂದು ನಿರ್ಬಂಧಿಸಲಾಗಿದೆ ಸಿಂಗಾಪುರದಲ್ಲೀಗ ಲಕ್ಷ್ಯರಿ ಕಾನೂನು ! ಸಿಂಗಾಪುರದ ರಕ್ಷಣೆಯ ಬಗ್ಗೆ ಭೂ-ಜಲ ಆಕಾಶ ಸೈನ್ಯ ಸಧಕಗಳು ಸಜ್ಜಾಗಿ ನಿಂತಿವೆ ಜಪಾನಿಯರು ಇದಕ್ಕಾಗಿ ಸಿಂಗಾಪುರವನ್ನು ನಾಲ್ಕೂ ಬದಿಯಿಂದ ಮುತ್ತುವ ವ್ಯೂಹವನ್ನು ರಚಿಸಿ ಸಿದ್ಧಾರೆ. ಪಶ್ಚಿಮ-ದಕ್ಷಿಣಕ್ಕೆ ಸುಮಾತ್ರಾ, ಪೂರ್ವಕ್ಕೆ ದೋಣಿಯೋ, ಉತ್ತರಕ್ಕೆ ಮಲಯಾಗಳಿಂದ ಜಪಾನಿಯರು ಸಿಂಗಾಪುರವನ್ನು ಮುತ್ತತೊಡಗಿದ್ದಾರೆ. ಜಪಾನಿಯರಿಗೆ ಈವಾಗ ಒಲು ಗಾಬರಿ. ವಿಳಂಬವಾದರೆ ಬ್ರಿಟನ್ನ ಅಮೇರಿಕೆಯವರು ತಯಾರಿ ಮಾಡಿಕೊಂಡು ಎದ್ದಗಟ್ಟುವರೆಂದು ಜಪಾನಿಯರಿಗೆ ಭೀತಿ ! ಜಪಾನ್ನದೊಳಗೆ ಎರಡು ವರ್ಷ ತಾಲುವಷ್ಟು ಪಟ್ರೋಲು ಉಂಟು. ಆದರೆ ಕವರು, ರಬ್ಬರು ಮೊದಲಾದ ಯುದ್ಧವಸ್ತುಗಳಿಕ್ಕೆ ಅವಶ್ಯಪುಳ್ಳ ಸಾಮಗ್ರಿ ಮಲಯಾದಿಂದಲೇ ಪೂರೈಸಿಕೊಳ್ಳಬೇಕಾ ಅಮೇರಿಕೆಗೆ ಇಚ್ಛವಂಲೇ ಈ ಸಾಮಗ್ರಿ ಹೇರಳವಾಗಿ ರವಾನಿಸಲ್ಪಡುತ್ತದೆ ಮಲಯಾದಿಂದ ಜಪಾನ ದೇಶ ೩೦೦೦ ಮೈಲು ಅಂತರದಲ್ಲುಂಟು. ಹೊಂಗಕೊಂಗ, ಫಿಲಿಪ್ಪಿನ ಪ್ರದೇಶಗಳನ್ನು ದಾಟಿ ಜಪಾನಕ್ಕೆ ಹಡಗಗಳು ಒಡಾಡಬೇಕು. ಅವರಿಂದಲೇ ಜಪಾನಿಯರು ಹೊಂಗಕೊಂಗ, ಫಿಲಿಪ್ಪಿನ ದೇಶಗಳನ್ನು ಮೊಟ್ಟಮೊದಲು ಮುತ್ತಿ ಕೈವಶ ಮಾಡಿಕೊಂಡಿದ್ದು! ಫಿಲಿಪ್ಪಿನಕ್ಕೆ ಸಹಾಯ ಕಳಿಸಲು ಅಮೇರಿಕೆಯಿಂದ ಸಾಧ್ಯವಾಗಿಲ್ಲಿ ಇನೇಹೂ ಪ್ರದೇಶಗಳು ಜಪಾನದ ವಶವಾದಿರಿಂದ ಸಿಂಗಾಪುರದ ವರೆಗಿನ ಹಾದಿ ಜಪಾನಿಯರಿಗೆ ನಿಸ್ತಂಟಕವಾಗಿದೆ, ಬ್ರಿಟನ್-ಅಮೇರಿಕೆಯವರಿಗೆ ಕಂಟಕವಾಗಿದೆ! ಮಲಯಾದಲ್ಲಿ ಪೆಟ್ರೋಲು ಹುಟ್ಟುತ್ತದೆ ಇದು ಈಗ ಜಪಾನ್ನಕ್ಕೆ ಸಿಗುವದು ಖಂಡಿತ.- ಡಚ್ಚರ ಸುಮಾತ್ರಾದ ಮೇಲೆ ಜಪಾನಿಯರು ವಿಮಾನುಗಳಿಂದ ಹಾರಿಹೋಗಿ ಬಾಂಬುಗಳನ್ನೊಗೆದು ಒಹಳ ಪ್ರದೇಶವನ್ನು ಅಧ್ವಸ್ತಗೊಳಿಸುತ್ತಿರೆ ಅದೇಪ್ರಕಾರ ದೋಣಿಯೋದಲ್ಲಿಯೂ ಜಪಾನಿಯರ ಆರ್ಭಾಟ ಮಿಗಿಲಾಗಿದೆ. ಬ್ರಿಟಿಶರು ಸಾಧಾರವಾಕದೊಳಗಿಂದ ತಮ್ಮ ಸೈನ್ಯವನ್ನು ಸುರಕ್ಷಿತವಾಗಿ ಹೊರಹೊರಡಿಸಿ ಕೊಂಡಿದ್ದಾರೆ. ಒಟ್ಟಿಮು ಕೆಂಚಿಂಗ ಬಂದರ ಜಪಾನಿಯರ ವಶವಾಗಿದೆ. ಈ ಬಂದರದಿಂದ ಸಿಂಗಾಪುರವು ಬರೇ ೪೮೦ ಮೈಲು ಅಂತರದಲ್ಲಿದೆ. ಇಷ್ಟು ಅಂತರ ವಿಮಾನುಗಳಿಗೆ ಕಷಪಡಾರ್ಧ. ತಾಸಿಗೆ ೩೨೦-೩೫೦ ಮೈಲು ಹಾರಿಹೋಗುವ ವಿಮಾನುಗಳಿಗಂತು ಸಿಂಗಾಪುರವು ನೆರೆಮನೆಯೇ ಸೈ ! ಆದರೆ ಸುಮಾತ್ರಾ, ಜೋಗ್ಜಿರೋ ಪಾರ್ಶ್ವಗಳಿಂದ ನನಗೆ ಉತ್ತರ ಪಾರ್ಶ್ವದ ಮಲಯಾದೊಳಗಿನ ನೆಲಮಾರ್ಗದ ಭೀತಿಯೆ ಹೆಚ್ಚು ಜಪಾನಿಯರು ಉತ್ತರದ ಮಲಯಾ ಪಾರ್ಶ್ವದಿಂದ ದಕ್ಷಿಣಕ್ಕೆ ಸಿಂಗಾಪುರ ಬದಿಗೆ ಮುನ್ನುಗ್ಗುತ್ತಿದ್ದಾರೆ ಪೆನಾಕ ಸಂಸ್ಥಾನದ ಇಪಾಹೋ ರಾಜಧಾನಿ ಜಪಾನರ ವಶವಾಗಿದ! ಕ್ವಾಂಟನ್ನೆ ಪಟ್ಟಣವೂ ಜಪಾನದ ವಶವಾಗಿದೆಯು ಜಪಾನಿಯರ ಅಂಜೋ ಜಪಾನದ ವಶವಾಗಿದೆಯು ಜಪಾನಿಯರ ಆರ್ಭಾಟ ಇಪಾಹೋ ಮಾರ್ಗದಿಂದಲೂ ಕ್ವಾಂಟನ ಮಾರ್ಗದಿಂದಲೂ ಜಪಾನಿವ ಸೈನ್ಯಪಥಕಗಳು ಬ್ರಿಟಿಶ ಸೈನ್ಯಗಳನ್ನು ಹಿಂದಕ್ಕಟ್ಟಿ ಮುನ್ನುಗ್ಗುತ್ತಿರುವವು. ಪೆನಾಕ ನಡಿಯನ್ನು ಜಪಾನಿಯರು ದಾಟಿ ಮುಂದಾಗುತ್ತಿದ್ದಾರೆ. ಹಿಂಜರಿಯುತ್ತಿದ್ದ ಬ್ರಿಟಿಶ ದಂಡುಗಳು ಸುರ್ಮಸ್ಥಾನಗಳನ್ನು ಆಕ್ರಮಿಸಿಕೊಂಡು ಜಪಾನವನ್ನು ಪ್ರತಿಭಟಿಸಲು ಸಿದ್ಧತೆ ಮಾಡಿರುವಂತೆ ! ಆದರೂ ನನಗೆ ಬಹಳ ಚಿಂತೆ. ಮಲಯಾದೊಳಗೆ ಹೆಚ್ಚೆಚ್ಚು ವಿಮಾನಗಳು ಹಾರಿ ಹೋಗುತ್ತಿವೆ. ಅದರಿಂದ ಪ್ರಸಂಗ ಕಠಿಣ ಕಾಣುತ್ತಿದೆ, ಮಲಯಾದ ಕಾಳಗಕ್ಕೆ ಬೇಕಷ್ಟು ಸೂಯಾ ಹೋಗುತ್ತಿದೆಯಂತೆ; ಕೆಸಿಯ ವರೆಗೆ ಬ್ರಿಟಿಶರು ಹೋರಾಡುವರಂತೆ, ಸಿಂಗಾಪುರವನ್ನು ಎತ್ತಕ್ಕೂ ಬಿಡರಂತೆ. ಹೀಗೆ ನಾತನ ಸೇನಾಪತಿಗಳಾದ ವೇವೇಲರವರು ಪ್ರಕಟಣೆ ಕೊರಡಿಸಿ ಸರ್ವರಿಗೂ ಆಶ್ವಾಸನ ಕೊಡುತ್ತಾರೆ. ಇದೇ ಜನಗಳಿಗೆ ಧೈರ್ಯ ! ಸಿಂಗಾಪುರವು ಬಿದ್ದರೆ ಜಗತ್ತಿನ ರೂಪವೇ ಬದಲುವದೆಂದು ಸೇನಾಪತಿ ಸ್ಟೀಫನ ಕಿಂಗಹೊಲರವರು ಈ ಹಿಂದೆಯೇ ಬರೆದಿಟ್ಟಿದ್ದುಂಟು. ಪ್ರಶ್ನೆಕ್ಕೆ ಸಿಂಗಾಪುರದ ಮೇಲೆ ಸಮುದ್ರ ಮಾರ್ಗದಿಂದ ಏನಿ ಮಾಡಲಿಕ್ಕೆ ಅನುಕೂಲವಿಲ್ಲ ದ್ದರಿಂದ ಜಪಾನಿಯರು ಉತ್ತರ ಪಾರ್ಶ್ವದ ಮಲಯಾ ಮಾರ್ಗವಾಗಿ ಒತ್ತಿ ಬರುತ್ತಿದ್ದಾರೆ ಇದೇ ಸಿಂಗಾಪುರಕ್ಕೆ ಭೀತಿ. ಜೊಹೋರ ಸಾಮುದ್ರಧುಪ್ಪಿಯ ವಿಧಾನದಲ್ಲಿ ನಿಕರದಿಂದ ಸೈನ್ಯಕ್ಕೆ ಹೋರಾಟಿವಾಗುವದು ಖಂಡಿತವಾದ ಮಾತು. ಈ ಯುದ್ಧದಲ್ಲಿ ಗೆದ್ದವರೇ ಸಿಂಗಾಪುರದ ಅಧಿಪತಿಗಳು ಸಿಂಗಾಪುರದ್ದೇ ಏತೆ, ಇಡೀ ಪೂರ್ವ ಪಾರ್ಶ್ವದ ಒಡೆತನವೇ ಅವರದು! ಸಿಂಗಾಪುರವು ಬಿದ್ದರೆ ಆಸ್ಟ್ರೇಲಿಯಾದ ವಸಾಹತಿಗೆ ಗಂಡಾಂತರವುಂಟು ಈಗಾಗಲೇ ಆಸ್ಟ್ರೇಲಿಯಾದೊಳಗೆ ಕೋಲಾಹಲವುಂಟಾಗಹತ್ತಿದೆ. ಮುಖ್ಯ ಪ್ರಧಾನರಾದ ಕರ್ಟನರವರು ಬ್ರಿಟಿಶ ಸಾಮ್ರಾಜ್ಯದ ರಕ್ಷಣೆಯ ಗೊಡನೆಗೆ ಹೋಗದೆ, ಆಸ್ಟ್ರೇಲಿಯಾದವರು ಸ್ವದೇಶ ರಕ್ಷಣೆಗಾಗಿ ಓಡಿಬರಬೇಕೆಂದು ವಿಧಿಸಿದ್ದಾರೆ ಸಿಂಗಾಪುರದಿಂದ ಆಸ್ಟ್ರೇಲಿಯಾದ ಡಾರ್ವಿನ್

(೨೯೯ ಪುಟದ ಪೀಲೆ ಮುಂದುವರಿದ)

ಕಾಗದ ದುರ್ಲಭವಾದ್ದರಿಂದ
ಇನ್ನು ಮುಂದೆ 'ವೃತ್ತ'ಕ್ಕೆ ಎಂಟೇ
ಪುಟಗಳಿರುವವು.

ಪೆನೇಜರ.

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ವಾರ ೨ ದಿನ ಸಾಧಾರಣ ಚಳಿ ಬಿದ್ದಿತು ಈಗ ೩ದಿನ ಚಳಿಯಾಗುತ್ತಿದೆ ಊರಾ ಆರೋಗ್ಯ ತತ್ಕ್ಷಮವಿಟ್ಟಿಗೆ ಚೆನ್ನಾಗಿದೆ

ಇಲ್ಲಿಯ ಅಂಡೇಕಟ್ಟಿಯಲ್ಲಿ ಕಾರಕೂನನಾಗಿದ್ದ ಶ್ರೀ ಎಸ್. ಎಸ್ ಮಯ್ಯುಮದಾರ ಇವರು ಕಳೆದ ತಾ ೩೦ ನೇ ಶನಿವಾರ ರಾತ್ರೆ ಆಕಸ್ಮಾತ್ ಹೃದಯ-ವಿಕಾರದಿಂದ ಕಾಲವಶವಾದರೆಂದು ತಿಳಿಸಲು ವಿಷಾದವಾಗುತ್ತಿದೆ. ಸನಿನಾರ ಮಧ್ಯಾಹ್ನದ ವರೆಗೆ ಅವರು ತಮ್ಮ ಕೆಲಸ ಮಾಡಿದ್ದರು

ನಗರ ಸಭೆಯವರು ತಾ. ೧ ರಿಂದ ಮಾಗಗಳ ಮೇಲೆ ನೀರು ಹಾಕಿಸಲಾರಂಭಿಸಿದ್ದಾರೆ. ಆದರೆ ಧೂಳಿನ ಉಪದ್ರವ ಮತ್ತೆ ಕಡಿಮೆಯಾಗಲಿಲ್ಲ. ಶಾಸ್ತ್ರದ ಪೂರ್ತ ನೀರು ಹಾಕಿದರೆ ಧೂಳು ಹಾರದೆ ಹ್ಯಾಗೆ ಉಳಿದೀತು ?

ಪ್ರಾಥಮಿಕ ಶಾಲೆಗಳಲ್ಲಿ ವ್ಯಾಯಾಮ ಶಿಕ್ಷಣ ಕೊಡಲು ಅನುಕೂಲವಾಗಬೇಕೆಂದು ಉದ್ದೇಶದಿಂದ ಶಿಕ್ಷಕರಿಗೆ ಅರಿಪಿ ವ್ಯಾಯಾಮ-ಶಿಕ್ಷಣ ಕೊಡಲು ತಾ ೨೬-೧೦ ರಿಂದ ಇಲ್ಲಿ ಒಂದು ವರ್ಗ ತೆರೆಯಲ್ಪಟ್ಟಿದೆ. ಈ ವರ್ಗ ಒಂದೇ ತಿಂಗಳು ನಡಿಯುವದಂತೆ. ೬೧ ಮಂದಿ ಶಿಕ್ಷಕ-ಶಿಕ್ಷಕಿಯರು ಈ ವರ್ಗದಲ್ಲಿ ಸೇರಿದ್ದಾರೆ

ಶುಕ್ರವಾರ ಸಂಜೆ ಇದ್ದಂಗ ಅಡಿಕೆ ಮಾರಾಟದ ಸಂತೆಯ ಕಟ್ಟೆಲಿಯಲ್ಲಿ ರಾತ್ರಿ ೪ ಗಂಟೆ ಹೊತ್ತಿಗೆ ಇವರ ಅಳಿಯ ಶ್ರೀಮತಿಯ ಕೆಳಗೆ ಸಭೆ ಸೇರಿದ ಕುಮಟಾ ತಾಲೂಕಿನ ತೋಟಿಗಾರರು (ಕೆಳಗೆ ಹೊನ್ನಾವರ ಸದಸ್ಯರ ಕೊಟ್ಟ) ಹೊಸ ಕುಳಿಯ ಸಭೆಯಂತೆಯೇ ಕೊಳೆ ಮದ್ದಿನ ಸಂಬಂಧದಲ್ಲೂ ಜಂಗಲ ಸಚಿವತ್ತಿಗಳ ಸಂಬಂಧದಲ್ಲೂ ಕೆಲವು ರಿಪಾವು ಗಳನ್ನು ಮಾಡಿದರು. ಬೋರ್ಡೋ ಮಿಶ್ರಣದ ಸಂಬಂಧದಲ್ಲಿ ಹೊಸಾಕುಳಿ ಸೀಮೆಯವರಿಗೆ ಬಂದ ಅನುಭವವು ಕುಮಟಾ ತಾಲೂಕಿನವರ ಅನುಭವವೂ ಒಂದೇ ಇರುತ್ತ ದೆಂದು ಸಭೆಯಲ್ಲಿ ತಿಳಿದುಬಂತು.

ಪೆಟ್ರೋಲಿನ ಸೀಮಾದಿಂದ ಮೋಟಿರ ಸೈಯಾಜಕರಿಗೆ ಬಹಳ ರೊಂಪರೆಯಾಗಿದೆ. ಜನವರಿ ೧೫ನೇ ತಾರೀಖಿನಿಂದ ಸೀಮಾ ಇನ್ನೂ ಅರ್ಧಕ್ಕಿಳಿದ್ದಿರಿಂದ ಪೋಟಿಯಾಗಳ ಓಪಾ ಟಿದಲ್ಲಿ ಯಾವದೇ ಸ್ಥಿರತೆಯಿಲ್ಲ. ಸಿಕ್ಕಿದಷ್ಟು ಪೆಟ್ರೋಲಿನ ಸೀಮಾದಷ್ಟನ್ನು ಕೊಳುಕೊಳುವ ಉಸಾಬರೀಗಿಲೆದೆ ಪ್ರಯಾಣಕ್ಕಿ ರಿಗೆ ಅನುಕೂಲವಾಗುತಂತಿದೆ. ಪ್ರಯಾಣಕ್ಕೆ-ಯೋಟಿರು ಗಳಾಗಿರಿ ಪಡಕೊಂಡ ಪೆಟ್ರೋಲು ಸರಕು ಮೋಟಾರುಗಳಿಗೆ ಬೀಳುತ್ತದೆ; ಕೆಲವರು ಪೆಟ್ರೋಲನ್ನು ಪಡೆದು ಮೋಟಿರು ಗಳನ್ನು ಸಡಿಸದೆ ಬಾಯಿಬಡಿಯುವರು ಉಂಟು. ಇದಕ್ಕೆ ಬೆಳಗಿ ನಯ ಮೋಟಿರ ಮಾಡಿರವ ಅವ್ಯವಸ್ಥೆಯೇ ಕಾರಣ ಪೆಟ್ರೋಲನ್ನು ದಂಡಿಕೊಡುವಾಗ ನೋಟಾರಿನವರಿಗೆ ವೇಳಾ ಪತ್ರಕವನ್ನು ಹಾಜರಪಡಿಸಲು ಅಪ್ಪಣೆ ನಾಡಿ ಆ ವೇಳಾಪತ್ರಕದಂತೆ ಮೋಟಾರುಗಳನ್ನು ನಡಿಸಲು ಏರ್ಪಾಡಾಗಿದ್ದರೆ ಹೀಗೆ ಅವ್ಯವಸ್ಥೆಯಾಗುತ್ತಿರಲಿಕ್ಕಿ ಪಡಕೊಂಡ ಪೆಟ್ರೋಲ-ಸೀಮಾವನ್ನು ಪಡಕೊಂಡ ಕಾರ್ಯಕ್ಕಷ್ಟೇ ವಿನಿಯೋಗಿಸತಕ್ಕದ್ದೆಂದು ಪೆಟ್ರೋಲ-ಸೀಮಾದಾರರಿಗೆ ನಮ್ಮೂರಿನ ಆದರೆ ಅವನ್ನು ಪಾಲಿಸುವದರ ಬಗ್ಗೆ ಮೋಟಾರ ಮಾಲಕರಲ್ಲಿ ಅವರು ಕಳಕಳಿಯಿಂದ ಕೋರಿಕೊಂಡರು.

ಅಲ್ಲಿ ಪ್ರಯಾಣಿಕರಿಗೆ ಸಂಕಟವಾಗಿಲ್ಲ. ಇತ್ಯಾದಿ ಪ್ರಯಾಣಿಕರೊಬ್ಬರು ಬರೆಯುತ್ತಾರೆ

ಈಗ ಹಾಯಸ್ಕೂಲುಗಳಲ್ಲಿ ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ಹೋಗುವ ವಿದ್ಯಾರ್ಥಿಗಳ ಪ್ರಾಥಮಿಕ ಪರೀಕ್ಷೆಗಳು ಗಲಿವೆ. ಇನ್ನು ೧ ತಿಂಗಳಲ್ಲಿ ಅಮೇಂಡ್ಮೆರರು ಪರೀಕ್ಷೆಗೆ ಕೂಡುವ ಸ್ಥಳಗಳನ್ನು ನಿರೀಕ್ಷಿಸಿ ಅಮೇಂಡ್ಮೆರ್-ಪತ್ರ ಗಳನ್ನು ಸಾಮರಪಡಿಸುವದಿದೆ ವಿಶ್ವವಿದ್ಯಾಲಯದವರು ಕಾರಾಗಾರವನ್ನು ಈ ವರ್ಷದೇ ಮೆಟ್ರಿಕ್ಯುಲೇಶನ್-ಕೇಂದ್ರ ವನ್ನಾಗಿ ಕೃರ್ಯಾಗಾರಿ ನೇಮಿಸಬೇಕು ಪೆಟ್ರೋಲಿನ ಬರ ಗಾಲದಲ್ಲಿ ಮೋಟಾರುಗಳ ಓಪಾಟ ಸಂಕೋಚವಾಗುವ ದಿದೆ ಹಡಗಿಗಳಂತು ಏನಂತು ಹೋಗಿವೆ ಧಾರವಾಡ ಕಡೆಗಾಗಲಿ ಮುಂಬಯಿ ಕಡೆಗಾಗಲಿ ಪ್ರಯಾಸ ಮಾಡುವದು ಮರ್ಯಾಟ ಈ ಕಷ್ಟಗಳನ್ನು ಸಲ್ಲಿಸಿ ವಿದ್ಯಾಲಯದವರು ಬಕ್ತಿಸಿ ಕೊಡಲೆ ಶುಕ್ರಮುಗಳನ್ನು ಹೊರಡಿಸಬೇಕು. ಹೀಗೆ ಕೆಲವು ವಿದ್ಯಾರ್ಥಿಗಳ ಪಾಲಕರು ಬರೆಯುತ್ತಾರೆ

ಪೇಟೆಯಲ್ಲಿ ಚಿಮನೆ-ಎಣ್ಣೆಯ ವಜಂಟರ ಎರುದ್ದ ನೂರು ಕೇಶಬರುತ್ತಿದೆ ಕಂಪನಿಯ ದರ ಕೊಟ್ಟೆರೂ ಬಿಲ್ಲರೆ ದಬ್ಬಿಗಳು ಸಿಗುವದಿಲ್ಲ ! ವಜಂಟರು ದೊಡ್ಡ ವ್ಯಾಪಾರಿ ಗಳಿಗೆ ನೂರಾಗಟ್ಟಲೆ ದಬ್ಬಿಗಳನ್ನು ಕೊಟ್ಟು ತಿಂಗಳ ಆಂಠ ಸಿರ್ಯಾಗಿ ಹೋಯಿತೆಂದು ಬಂದ ಬಂದ ಗಿರಾಕಿಗಳಿಗೆ ಬೆಳಗುತ್ತಾರಂತೆ ! ಮೊನ್ನೆ ಕಂಪನಿಯವರು ತಂತಿಯಂದ ದಬ್ಬಿ ೧೯೯ ಇಡೆಯಂತೆ ದರವನ್ನೇರಿಸಿದ್ದಾರೆ ಚಿಮಣಿ ಎಣ್ಣೆಯು ಗೊಂದಲದಲ್ಲಿ ಬದುಗ್ಗರು ರಾತ್ರೆಯನ್ನು ಕತ್ತಲೆ ಯಲ್ಲೇ ಕಳೆಯುವ ಪ್ರಸಂಗ ಬಂದಿದೆ. ಅವರೆ ಕಸ್ಟ ನೋಡಿಯಾದರೂ ಉಪಬಂಧಕ ವರ್ತಕರೂ ವಿಜಂಟರೂ ಕ್ಷಮಿಸಬಹುದಾದೀತೇ ?

ಚಿಮಣಿ ಎಣ್ಣೆಯ ದರವನ್ನು ಕಂಪನಿಯವರು ಸರಕಾರದ ಅಪ್ಪಣೆ ಪಡೆದು ಮೊನ್ನೆ ಶನಿವಾರದಿಂದ ದಬ್ಬಿಗೆ ೩। ಆಣೆ ಯಿಂದ ಏರಿಸಿದ್ದಾರೆ ಹೀಗೆ ಈ ಚಿಲ್ಲರೆಯ ಕಾರಣಕ್ಕೆ ಬಂದ ರಗಲ್ಲೂ ಈಗ ದಬ್ಬಿ ೦ಕ್ಕೆ ರೂ ೪ ೪-೩ ಬೀಳುತ್ತದೆ. ಮತ್ತೆಯಿಂದ ಒಳಗೆ ಒಯ್ಯುವ ಖರ್ಚು ವಾಸ್ತ ಅಯಾ ಸ್ಥಳದವರು ಈ ದರದಲ್ಲಿ ಸೇರಿಸಕತ್ತಿದ್ದಿದೆ ಇದಲ್ಲದೆ ಸೇರಿ ಸಿದರೆ ಸದಾಶಿವನಗರದಲ್ಲಿ ದಬ್ಬಿಯ ದರ ರೂ. ೪-೫೦, ಕಾರವಾರದಲ್ಲಿ ರೂ ೪-೫ ೬, ಅಂಕೋಲೆಯಲ್ಲಿ ರೂ.೪-೪.೦ ತದಿಯಲ್ಲಿ ರೂ ೪-೫೬, ಕುಮಟೆಯಲ್ಲಿ ರೂ. ೪-೫೬, ಹೊನ್ನಾವರದಲ್ಲಿ ರೂ ೪ ೫-೦, ಶಿರಾಲಿಯಲ್ಲಿ ರೂ. ೪-೫೦, ಭಟ್ಕಳದಲ್ಲಿ ರೂ ೪-೬೦, ಶಿರೂರಿಯಲ್ಲಿ ರೂ. ೪-೪೦, ಸಿದ್ದಾಪುರದಲ್ಲಿ ರೂ. ೪-೬೦, ಯಲ್ಲಾಪುರದಲ್ಲಿ ರೂ. ೪ ೬-೦ ಹೀಗೆ ದರ ಬೀಳುತ್ತದೆ ಪ್ರತಿ ದಬ್ಬಿಯಲ್ಲಿ ೩೮ ಲಾಟ್ಟು ಇದ್ದರೆ ೩೪ ಪಿಂಟ್ ಎಣ್ಣೆ ಇರುತ್ತದೆ ಖಾಲಿ ದಬ್ಬಿಗೆ ೯ ಆಣೆ ಪೆಶಯಂತೆ ಈಗ ಚಿಮಣಿ-ಎಣ್ಣೆ ದರಕ್ಕೆ ಮಿತಿ ಯಿಲ್ಲ ಲಾಟ್ಟಿಗೆ ೧॥—೪ ಆಣೆಗಳಂತೆ ಸಹ ಪೂರೈಸಬ ಲಿದ್ದಾರೆ ಹೊನ್ನಾವರದಲ್ಲಿ ಚಿಮಣಿಎಣ್ಣೆಯ ಗಲಾಟೆ ಮೇಲಿ ದ್ದಂತೆ ! ಕಂಪನಿಗಳ ವಜಂಟಿ-ವೀಂಟರೊಳಗೆ ಎಣ್ಣೆ ಕೊಡಕೊಳ್ಳುವ ವ್ಯವಹಾರ ನಡೆದಿದೆ ! ವರ್ತಕರಿಗೆ ಎಣ್ಣೆ ಯೇ ಸಿಗಲೊಲ್ಲದು ! ಕುಮಟೆಯಲ್ಲಿಯೂ ಸಾರಾಸ್ಟನಾಗಿ ಇದೇ ಸ್ಥಿತಿ ಧಾರವ ರಕ್ಷಣ ಕಾರಾಪಾಡಿಕ್ಕಾಯ ಎಣ್ಣೆಯ ವ್ಯವಹಾರದಲ್ಲಿ ಹಿಂದುಸ್ಥಾನ ಸರಕಾರದ ಸ್ಟಾಂಡರ್ಡ ಸಿದ್ಧವಾಗಿದೆ. ಎಣ್ಣೆಯ ದರ ಮತ್ತು ಪರಿಮಾಣಗಳನ್ನು ನಿಶ್ಚಯಿಸುವದು, ಹಂಚುವದು ಸರಕಾರದ ಸ್ಟಾಂಡಿನವಾಗಿದೆ. ಹೀಗಿದ್ದು ಚಿಲ್ಲಾಧಿಕಾರಿಗಳು ಸುಮ್ಮನೆ ಕೂಡುವದು ಬೋಗ್ಯವಲ್ಲ ಕಂಪನಿಯ ವಿಜಂಟರಿಗೆ ಹಾಗೂ ಹೀಗೂ ಮಾಡಿ ತರ ವಲ್ಲಿ ಸೈಸುವದು ಕಿವಿಮಾತ್ರಿಗೆ ಚಿಲ್ಲರೆಯಲ್ಲಿ ಇದೇ ಸ್ಥಕಾರ ದರ ಏರಿಸಲ್ಪಟ್ಟಿತ್ತು. ಆದರೆ ಕಲೆಕ್ಟರರು ಕಿವಮಗ್ಗೆ-ಷಾರಿಗಳಲ್ಲಿ ಹೇಳಿದಿ ಎಣ್ಣೆ-ಕಿಕ್ಕಿಗಳನ್ನು ಉಗ್ರಾಣಗಳಿಂದ ಹೊರಕಿಸಿ, ಅವನ್ನು ಸಕ್ಷಿತ ಜನರಿಂದ ವಾಜಾಬು ಮಾಡಿ ಚಿಲ್ಲರೆಯಂಗಡಿಗಳಿಗೆ ಕಳಿಸಿರಿ ಪಾಸನವಾಗುವಂತ ಏರ್ಪಾಡು ಮಾಡಿದ್ದಾರಂತೆ. ನಮ್ಮೂರಿನ ಜಿಲ್ಲಾಧಿ ಕಾರಿಗಳು ಇಂಥಾದೆ ಏರ್ಪಾಡನ್ನು ಇತ್ತೀಚೆಗೆ ವರ್ತಕರುಮಾಡಿ ಧೂಪದವಲ್ಲಿ ಇತ್ಯಾದಿ ಸಂಚಾರಗಳೊಟ್ಟರು ಬರೆಯುತ್ತಾರೆ

ಹೊನ್ನಾವರ— ಚಳಿ ಬೀಳುತ್ತಿದೆ. ಅತ್ಯಂತ ಭತ್ತ ಗಳ ದರ ಇಳಿಯುತ್ತಿದೆ.

ಕೆಲವು ದಿವಸಗಳ ಹಿಂದೆ ಅಬಕಾರಿ ಅಧಿಕಾರಿಗಳು ಒಬ್ಬನ ಮನೆಯ ಝಾಡ್ತಿ ಮಾಡಿದಾಗ ಮನೆಯ ಹಿಂಬದಿಗೆ ಒಂದು ಸರಾಯಿಯ ಬಾಟ್ಲಿಯೂ ಒಂದು ಖಾಲಿ ಬಾಟ್ಲಿಯೂ ಸಿಕ್ಕಿದ್ದವಂತೆ. ಅವನಿಗೆ ಮೆಜಿಸ್ಟ್ರೇಟರು ರೂ. ೨೫ ದಂಡ ವಿಧಿಸಿದ್ದಾರೆ. ಇತ್ತೀತ್ತ ಅಬಕಾರ್ಯಧಿಕಾರಿಗಳ ಹಸ್ತ ಕರು ಕಳ್ಳತನದಿಂದ ಸರಾಯಿಯ ಬಾಟ್ಲಿಗಳನ್ನು ಹಿಬ್ಬಿಟ್ಟು ಮನೆಯ ಅಧಿಕಾರಿಗಳಿಗೆ ಶರತಂದು ಝಾಡ್ತಿ ಮಾಡಿಸುತ್ತಾರೆಂದು ಕೆಲವರು ದೂರುತ್ತಾರೆ. ಮೇಲಧಿಕಾರಿ ಗಳು ಇವರ ಚಾಕಿ ಮಾಡಬೇಕು.

ಕಳೆದ ವಾರ ಗೌಡಸಾರಸ್ವತರ ಮರದಲ್ಲಿ ಭಜನೆ ಸಕ್ಕಾಹ ವಾಯಿತು. ಮಂಗಲದ ದಿನ ಅನ್ನ ಸಂತರ್ಪಣೆಯೂ ಆಯಿತು

ಮಡಿವಾಳ ಹಳ್ಳಿಕ್ಕೆ ೨ ವರ್ಷಗಳಿಂದ ಒಡ್ಡು ಹಾಕಿಲ್ಲ ಆದರೆ ದಡ್ಡಲ ನೆರೆಹೊರೆಯಲ್ಲಿ ಸೀಡಿ ನೆರೆಯಿಂದ ಬೆಳೆ ಹಾಳಾಗಿದೆ ಯಂತೆ ! ಸರಕಾರದವರಾದರೂ ಈ ಒಡ್ಡನ್ನು ಹಾಕಿಸುವ ವ್ಯವಸ್ಥೆ ನೋಡಬೇಕು. ಒಡ್ಡಿನ ವೆಚ್ಚವನ್ನು ಬೇಕಾದರೆ ಸಂಬಂಧಪಟ್ಟ ಭೂಮಾಲಿಕರಿಂದ ತೀರ್ವ ಸಂಗಡ ವಸೂಲು ಮಾಡಬಹುದು

ಚಿಮಣಿ-ಎಣ್ಣೆ ಸಿಗದ್ದರಿಂದ, ಸಿಕ್ಕರೂ ತುಟ್ಟಿ ಬೀಳು ತ್ತಿರುವದರಿಂದ ಬಡಬಗ್ಗರು ಗೋಳಿಡುತ್ತಿದ್ದಾರೆ ಚಿಮಣಿ-ಎಣ್ಣೆಯನ್ನು ರಕರ್ಮಾಟ್ಟಿ ಕೊಡದೆ ಬಟ್ಟಲ ಚಿಲ್ಲರೆಯಾಗಿಯೇ ಮಾರುವಂತೆ ಅಧಿಕಾರಿಗಳು ವಜಂಟರಿಗೆ ಎಚ್ಚರಿಕೆ ಕೊಡುವದೇನಿತು

ಕಳೆದ ತಾ ೨೬ ನೇಗೆ ಸಾಲಕೋಡ, ಶೀರಕೋಡ, ಮುಗ್ವೆ, ಹೊಸಾಕುಳಿ, ಕಡ್ಲೆ, ಅಡಿಕಿಳ್ಳಿ-ಮುಂಡಗೋಡ, ಕಂದೂರ, ದುಗ್ಗೂರ, ಅಂಕೆಳ್ಳಿ, ನೀಗೆ, ಹಡಿನಬಳ ಮತ್ತು ಕಡಕೋಣ ಈ ೧೨ ಹಳ್ಳಿಗಳ ರೈತರು ಹೊಸಾಕುಳಿ ಪೈಕಿ ಸರತಿಗರೀಯಲ್ಲಿ ರಾ| ಬಿ| ಶ್ರೀ. ಕರ್ತ ವಕೀಲ ಹೊನ್ನಾ ವರ ಇವರ ಅಧ್ಯಕ್ಷತೆಯಲ್ಲಿ ಸಭೆಗೂಡಿ, ಈ ಕೆಳಗಿನಂತೆ ಗೊತ್ತುವಳಿಗಳನ್ನು ಮಾಡಿರುತ್ತಾರೆ.- (೧)ಕಳೆದ ೩೦ ವರ್ಷ ಗಳಿಂದ ನಾವು ಪೋರ್ಡೋಮಿಶ್ರಣದ ಉಪಯೋಗ ಮಾಡಿ ಅನುಭವತಕ್ಕೊಂಡ್ಡಿದ್ದೇ ಈ ಮದ್ದು ಸತತ ಉಪಯೋಗಿಸಿ ದರೆ ಮರಗಳು ಬಜ್ಜಾಗುತ್ತವೆ, ಕೊಯಿಗೆ ಸತ್ತು ಹೋಗು ತ್ತವೆ; ಅಡಿಕೆ ಸಣ್ಣವಾಗುತ್ತವೆ, ದಿಕೆಯ ಪ್ರಮಾಣವೂ ಕುಗ್ಗುತ್ತದೆ, ಕುಟ್ಟುವ ಆಡಿಕೆಯೂ ಹೀನ ತರಗತಿಯಾ ಗಾಗುತ್ತದೆ ಎಲೆ ಮಾರಿಗೆಗೆ ಹಾಸಿ ಹೆಚ್ಚಾಗುತ್ತಿದೆ. ಆದ ಕ್ಕಾಗಿ ಮಂದು ನಿಂದಿಸಿನಾಗ ಆಯಿ ಎಲೆ-ಬಳ್ಳಿಗಳ ಮೇಲೆ ಬೀಳುತ್ತಿರುವದರಿಂದ ಅವಶ್ಯ ಹಾನಿಯೂ ಬಹಳ ಸಪ್ಪವಾಗುತ್ತದೆ. ಅದ್ದರಿಂದ ಈ ಮದ್ದು ನಮ್ಮ ತೋಟಗಳಿಗೆ ಹೇಗಾದ್ದಲ್ಲವೆಂದು ಈ ಕಛೆಯ ಅಧಿಕಾರ್ಯಾ ವಿಯೆ ಒಪ್ಪಿರಿಂದ ಈ ಮದ್ದಿನ ಉಪಯೋಗ ಹೆಚ್ಚಿಸಲು ಇದರ ಪ್ರಯತ್ನಗಳನ್ನು ಸಭೆಯು ಬಲವಾಗಿ ಇಷ್ಟಪಡಿಸುತ್ತಾ ದೆ. (೨) ಪ್ರಜಾಸ್ವತಂತ್ರಿಧಿಗಳಿಂದ ಒಡಗೂಡಿದ ಕಾನೂನು ಮಂಡಲಗಳ ಅಧಾನದಲ್ಲಿ ಮುಂಬಯಿ ಸರಕಾರದವರು ಕಳೆದ ಸಪ್ಪಲದ ತಿಂಗಳೊಳಗೆ ಸುದ್ದಿ-ಪತ್ರಿಕ್ಷೆಗಳ ತಯಾ ರಿಸಿದ ಕೊಳೆಗೊಗದ ಕಾಯಿದೆಗಳನ್ನು ನಮ್ಮ ಜಿಲ್ಲೆಯಲ್ಲಿ ಜಾರಿಯಲ್ಲಿ ತರಬಾರದೆಂಬ ಈ ಸಭೆ ಸರಕಾರಕ್ಕೆ ವಿನ್ನಪ ಸುತ್ತಿದೆ ಆ ಕಾನೂನು ಜಾರಿಯಲ್ಲಿ ಬಂದರೆ ಕೊಳೆಬಿದ್ದಿನೆ ಲಂಬ ಜನರಲ್ಲಿ ಮತ್ತಷ್ಟು ಅಪ್ರೀತಿಯುಂಟಾಗಿ ಅನಂತೋ ಷ ಉಂಟಾದು (೩) ಸರಕಾರದ ಹೊಸ ಕಾನೂನಿಗೆ ಎಮು ಗಿಸ್ಸು ತೆಕ್ಕಟ್ಟಾರರು ಅನುಕೂಲರಾಗಿರೆಂದು

ಬೇಕಾಯ ಇಲಾಬೆಯವರು ಸರಕಾರಕ್ಕೆ ಮಾಹಿತಿ ಕೊಟ್ಟಿದ್ದಾರೆ. ೩. ಮಾಹಿತಿ ಸಂಪೂರ್ಣ ಸಿದ್ಧಿಯುಕ್ತವೆಂದು ಈ ಸಭೆಯು ಸರಕಾರಕ್ಕೆ 'ತಿಳಿಸಬಯಸುತ್ತದೆ (೪) ಸುಲಿ ಪದಾರ್ಥವನ್ನು ಸಾಗಿಸುವುದಕ್ಕೆ ಕೊಂಗ್ರೆಸ ಮಂತ್ರಿಮಂಡಲವು ಸಮುಗಿ ದಯಪಾಲಿಸಿದ ಜಂಗಲ ಸರಬರಾಜಿನ ಸಂಸ್ಥೆಗಳಿಗೆಯಾವ ಬಗ್ಗೆ ಬಂದ ಸೂಚನೆಗಳನ್ನು ಸರಕಾರದವರು ಧೃತಿಯದೇರಿಗಾಗಿ ಸಾರ್ವಜನಿಯರ ಈ ಸರಬರಾಜುಗಳನ್ನು ಸಂಕೋಚಗೊಳಿಸಿದರೆ ದೈಕ ವರ್ಗದವ್ಯಕ್ತಿ ತೀವ್ರ ಅನುಕೂಲಕ ಕಬ್ಬುವದು ಖಂಡಿತ ಮತ್ತು ಅದರ ಪರಿಣಾಮ ನೆಟ್ಟಗಾಗಲಿಕ್ಕಿಲ್ಲೆಂದು ಸಭೆಯು ಎಚ್ಚರಿಕೆ ಕೊಡುತ್ತಿದೆ

ಖಾ. ೨ಎನೇಗೆ ಪುನಃ ಕಡತೋಕೆಯಲ್ಲಿ ಕೆಕ್ಕಾರ, ಕಡ ತೋಕೆ, ಮಾಡಗೇರಿ, ನನಿಲಗೋಣ, ಅಂಕ್ಕೆ ಹುಳ್ಳ ಕ್ಷ ಈ ೬ ಶಕ್ಕೆಗಳ ತೋಟಗಳು ರಾಗಿ ಕಡತೋಕೆ ಗಣಪತಿ ಹೆಗಡೆ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಮೇಲಿ ನಂತೆಯೇ ಗೊತ್ತುವಳಿಗಳನ್ನು ಮಾಡಿದುತ್ತಾರೆ. ಸದರಿ ಸಭೆಗೆ ಜಲ್ಲಾಧ್ಯಕ್ಷರ ರಾಗಿ ಶಿವರಾಜ ಪಾಟ್ಕೀರವರು ಹಾಜರಾದ್ದು, ಕೊಳೆ-ಮದ್ದಿಗೆ ಸಂಬಂಧಪಟ್ಟ ಮುಂಬಯಿ ಸರಕಾರದ ೧೯೪೦ನೇ ಇಸವಿಯ ೧೪ನೇ ಆಸನಾನ ಅಧ್ಯಾಪನ್ನು ವ್ಯಾಪ್ತಿಯನ್ನಕ್ಕೆ ತಿಳಿ ಹೇಳಿದ್ದರು.

ಭಟ್ಕಳ— (ತಾ. ೩-೧-೪೨) ೨ ವರಗೆಗಿಂದ ಕಡಲದ ಮಧ್ಯದಲ್ಲಿ ಇರಿಗಲು ಬೀಳುತ್ತಿನ ಆದಿಕಾರಿಗಳು ಊರಲ್ಲಿ ಪ್ಲೇಗಿಂಬಿಯು ಜಾಹೀರ ಮಾಡಿದ್ದಾರೆ ಈ ವರೆಗೆ ೨ ಮರಿಗಳು ಸಂಭವಿಸಿವೆ. ನಗರ ಸಭೆಯವರು ಗಟ್ಟುರುಗಳನ್ನು ಸ್ವಚ್ಛಗೊಳಿಸಿ ಲಿಲ್ಲ ಹೀಗಿಗೆ ಮಾಡುವದನ್ನು ಸತ್ಯಿಯಂದ ನಿಷ್ಪಕ್ಷಿಬೇಕಾಗಿ ಸೂಚನೆಯಿದೆ

ಇಲ್ಲಿಯ ವಿದ್ಯಾರ್ಥಿಗಳು " ವಿದ್ಯಾರ್ಥಿಗಳ ಕೂಟ"ವೆಂಬ ಸಂಸ್ಥೆಯನ್ನು ಸ್ಥಾಪಿಸಿರೊಂದಿದ್ದಾರೆ. ವಿದ್ಯಾರ್ಥಿಗಳ ಕಾರೀ ರ್ಯ, ಮನಸಿಕ ಮತ್ತು ನೈತಿಕ ಉನ್ನತಿ ಸಾಧಿಸುವದೇ ಸಂಸ್ಥೆಯ ಗುರಿ ಆ ಗುರಿಗನುಗುಣವಾದ ಒಂದು ಕಾರ್ಯಕ್ರಮವೂ ಸಿದ್ಧಗೊಳಿಸಲ್ಪಟ್ಟಿದೆ. ರಾಗಿ ದತ್ತಾತ್ರಯ ವಿ. ಹೆಗಡೆಯವರು ಕಾರ್ಯದರ್ಶಿ ಸಂಸ್ಥೆಯ ಅಧ್ಯಕ್ಷರಾಗಿ ಆರಿಕಟ್ಟಿ ಟ್ಟಿದ್ದಾರೆ.

ಹೊನ್ನಾವರದ ಅಬಕಾರಿ ಅಧಿಕಾರಿಗಳು ತೆಂಗಿನಗುಂಡಿ ಯಲ್ಲಿ ೩ ಒಂದು ಸಾರಾಯಿಭಟ್ಟಿಯನ್ನು ಹಿಡಿದಿದ್ದಾರೆ. ಈ ಭಾಗದಲ್ಲಿ ಇನ್ನೂ ಅನೇಕ ಭಟ್ಟಿಗಳಿವೆಯಂತೆ.

ಅವರ್ಸಾ (ತಾ. ೨-೧-೪೨) ಈಗ ಊರಲ್ಲಿ ಚಳಿ ಜ್ವರ, ವಿಷಮ ಜ್ವರ, ಬಟ್ಟೆಜೊರಕಗಳ, ಮೈಲಿ ಮುಂತಾದ ಬೇನಗಳವೆ. ಅವೂಂದು ಯಿಕ್ಕಾಸಾದ ವೈಲಾಟಗಳಿಗೆ ತಡೆ ಬಿದ್ದಿರುವದಿಲ್ಲ! ಮೇಲಿಂದ ಮೇಲೆ ಆಟಗಳಾಗುತ್ತವೆ. ಆಗಂತೂ ಕೇಳಲಿ ಇಟ್ಟು ಆಟವಾಡುವ ಬಗ್ಗೆ ಒಂದು ಥರಬೇರೆ ತಯಾರಾಗುತ್ತದೆಯಂತೆ! ಊರ ಅರೋಗ್ಯದ ದೃಷ್ಟಿಯಿಂದ ಹೀಗೆ ಆಟಗಳಾಡೂದೂಡುವದು ವಿಹಿತವೋ ಎಂಬದರ ವಿಚಾರ ಅಧಿಕಾರಿಗಳು ಮಾಡುವರೇ?

ಕಾರವಾರ— ಕೈತ್ತ ಯುಗಾದಿಯ ವಿದುಬಗಳ ಲಟವಡೆಯಲ್ಲಿ ಇಲ್ಲಿಯ ಸರಕಾರಿ ವಕೀಲ ರಾಗಿ ಸಾಗಿ ಮಂಜಸಾಧಂಗಾವ ಚಂಂಬಾವರೇಲಿಗೆ ರಾವಬಹಾದ್ದೂರ ಸದವಿಯಿಂ ಅಂಕೋಲೆಯ ಯುವ್ಕ-ಕವಿಗಳಾದ ರಾಗಿ ವೆಂಕಟೇಶ ದೇವಪ್ಪಾ ವಗಳರಿಗೆ ಜಾಮ್ಯದ ಕೈಸರ-ಇ-ಹಿಂದ ಪದಕವೂ ದೊರೆತಿದೆ.

ಕಳೆದ ಖಾ ೨೬ನೇಗೆ ಮುಂಬಯಿಯ ಕೊಂಕಣಿಗರು ಶ್ರೀಮತಿ ರಾಮಾಬಾಯಿ ಪಡಬಿದ್ರಿಯವರ ಅಧ್ಯಕ್ಷತೆ ಯಲ್ಲಿ ಸಭೆಸೇರಿ, ತ್ರಿವೇ ಕೊಂಕಣಿ ಸಮ್ಮೇ ಲನವನ್ನು ಇದೇ ಬರುವ ಈಸ್ಟರ ರಜೆಯಲ್ಲಿ ಮುಂಬಯಿಯಲ್ಲಿ ಕೂಡಿಸಬೇಕೆಂದು ತೀರ್ಮಾನಿಸಿದ್ದಾರೆ

ಇತ್ತೀಚಿನ ವರ್ತಮಾನದ ಪ್ರಕಾರ ರಾಗಿ ಸಾಧನ ಪ್ರಭುವರ್ಯ ಆ ಕಾಲಕ್ಕೆ ಸಭೆಯಲ್ಲಿ ಹಾಜರು ಇರುವ, ಕೊಂಕಣಿ ಪರಿಷತ್ತಿನ ಜನ್ಮದ ಇತಿಹಾಸ ವನ್ನೂ ಸ್ಥಳ ಪರಿಚಯವನ್ನೂ ಕಾರ್ಯಕರ್ತಾಧಿಗಳ ಸೂಚಿಯನ್ನೂ ವಿವರಿಸಿ, ಕೊಂಕಣಿ ಭಾಷೆಯಲ್ಲಿ ಉದ್ಧಾರಕ್ಕಾಗಿ ಏನೇನು ಮಾಡಬೇಕು ಎಂಬುದನ್ನು ತಿಳಿಸಿ ಹೇಳಿದರಿಂದ ತೀರ್ಮಾ ಒಂದಿಷ್ಟ ರಾಗಿ ಕಾರಿಸಾವ ಶ್ರೀಧರ ನಾಯಕರವರ ಸೂಚನೆಯಂತೆ, ಪರಿಷತ್ತಿನ ವ್ಯವಸ್ಥೆ ಮಾಡಲಿಕ್ಕಾಗಿ ಮುಂಬಾಯಿ ಕೂಡಿಸಲಿಕ್ಕೆ ಸಭೆಯು ೨೨ ಸದಸ್ಯರಿಂದೊಡಗೂಡಿದ ಒಂದು ಕಾರ್ಯಜಾಲಕ ಸಮಿತಿ ಯನ್ನು ನೇಮಿಸಿದ್ದಾರಂತೆ

(ತಾ. ೪-೧-೪೨) ಈ ವರ್ಷದಿಂದಲೇ ಇಲ್ಲಿ ಮಿಶ್ರಕ್ಕ ಪರೀಕ್ಷೆಯು ಕ್ಷೇತ್ರಿಂದ ತೆರೆಯಲಿಕ್ಕೆ ವಿಶ್ವವಿದ್ಯಾ ಲಯದ ಸಾಜಾರ ರೊರೆತಿದೆಯೆಂಬ ಮಾತ್ರ ಬಂದಿದೆ.

ಸಿಂಗಾಪುರಕ್ಕೆ ಸರ್ವನಾಶ.

(ಪಕ್ಷಿ ಪುಟದಿಂದ ಮುಂದುವರಿದ್ದು)

ಬಂದರ ೧೯೦೦ ಮೈಲು ಅಂತರದಲ್ಲಿದೆ. ಇದು ವೈಮಾನಿಕರಿಗೆ ಒಪ್ಪತ್ತಿನ ದಾರಿ. ಸಿಂಗಾಪುರವು ಬ್ರಿಟಿಶರ ಕೈ ಬಿಟ್ಟರೆ ಆಸ್ಟ್ರೇಲಿಯಾ ವಸಾಹತು ಸಾಮ್ರಾಜ್ಯಕ್ಕೆ ಸಂಪರ್ಕವೇ ಸ್ಥಗಿತಗ್ಯುವದಾಗಿ ನನಗೆ ಅಂಜಿಕೆ. ಜಪಾನಿಯರು ಮಲಯಾದಲ್ಲಿ ಭಯಂಕರ ಅತ್ಯಾಚಾರಗಳನ್ನು ಆಚರಿಸುತ್ತಿದ್ದಾರೆ ದಕ್ಷಿಣ ಭಯಾಮದಲ್ಲಿ ಕೆಲವು ಬ್ರಹ್ಮಣ್ಯರಿದ್ದರೆಂತೆ ಅವರು ತಮ್ಮ ಆಸ್ತಿ-ಸಾಸ್ತಿಗಳನ್ನೆಲ್ಲ ಹೊರಬು ಗುಳಿ ಕಟ್ಟಿ ಕೊಂಡು ಓಡಿಹೋಗುವುದಕ್ಕೆ ಸಿದ್ಧರಿದ್ದರಂತೆ ಅವರಿಗೆ ಜಪಾನಿಯರು ದಾರಿಯಲ್ಲಿ ಹಿಡಿದು ನಿರ್ದಯೆಯಿಂ ದ ಗುಂಡು ಹಾಕಿ ಕೊಂದರಂತೆ! ಸಿಂಗಾಪುರವನ್ನು ಕೈವಶ ಮಾಡಿಕೊಳ್ಳುವದಕ್ಕಾಗಿ ಜಪಾನಿಯರು ಬಹು ಕಠೋರವಾಗಿ ನಡೆದುಕೊಳ್ಳುವರೆಂದು ಎಣಿಸಿ ನಾನು ವೃಗ್ನನಾಗಿದ್ದೇ ನೆ ಇವೆಂಹದ ಕೇಳಿದುವ ನೆಲಾಂಗೋರ ಜೆಟ್ಟಿಯಲ್ಲಿ ಬ್ರಿಟಿಶ ಧ್ವಜಾವನ್ನು ತಾವು ಭೇದಿಸಿದೆವಾಗಿ ಜಪಾನಿಯರು ಹೇಳುತ್ತಾರೆ. ಆದರೆ ಲಂಡನ್ನಿನಲ್ಲಿ ಈ ಸುದ್ದಿ ತಿಳಿದಿಲ್ಲ. ಪೆರಾಕದಲ್ಲಿ ಶುಕ್ರವಾರ ಮೂರಾವರ್ಷಿ ಜಪಾನಿಯರು ಮುನ್ನುಗ್ಗಿದ್ದರು ಮೂರೂ ಬಾರಿ ಅವರನ್ನು ಬ್ರಿಟಿಶರು ಅರ್ಧಾದಿಂದ ಹಿಂದಕ್ಕಟ್ಟಿದರು. ಈ ಸುದ್ದಿ ಸಿಂಗಾಪುರದಿಂದ ದೇರವಾಗಿ ಬಂದಿದೆ ಪೆರಾಕ ಪ್ರದೇ ಶದಲ್ಲಿ ಘೋರ ರಣಕಂದನ ನಡೆದಿದೆಂಬ ಮಾತು ದಿಟವಾದದ್ದು. ಆದರೆ ಪರಿಣಾಮದ ಮೇಲೆಯೇ ಜಗ ತ್ತಿನ ಭವಿಷ್ಯ ಅವಲಂಬಿಸಿಕೊಂಡಿದೆ. ಆದರಿಂದ ಈ ನಂಗ್ರಿವನ್ನು ಓದುಗರು ನೀರ್ವಿಕ್ಷಿಸುತ್ತಿರಬೇಕು. ಮಲಯಾದೊಳಗಿನ ಯುದ್ಧವಲ್ಲಿ ಹಿಂದೀ ಸೈನಿಕರು ಸಾಹಸದಿಂದ ತೋಷಿನ ಮಳೆಗರೆದು ಜಪಾನಿಯರ ಮೇಲೆ ಕಡಕೊಂಡು ಬಿದ್ದರಂತೆ. ಈ ಪರಾಕ್ರಮ ಸಾರ್ಥಕವಾಗದಿದ್ದರೂ ಹಿಂದೀಯರು ವೀರಭಟರೆಂದು ಶತ್ರುಗಳಾದ ಜಪಾನಿಯರು ಸಹ ಹೊಗಳಿದ ವಾರ್ತೆ ಕೇಳಿ ನಭನಿಷ್ಪೋ ಸಮಾಧಾನ! ಹಿಂದುಸ್ಥಾನವು ಸ್ವತಂತ್ರವಾಗಿದ್ದರೆ ಇನ್ನೂ ಅಭಿಮಾನದಿಂದ ಹಿಂದೀ ಯರು ಹೋರಾಡಿ ಜಪಾನಿಯರನ್ನು ಹಿಮ್ಮೆಟ್ಟಿಸದೆ ಇರುತ್ತಿರಲಿಲ್ಲ.

ಇತ್ತ ಲಕ್ಷಗೊಡಿರಿ! ಇತ್ತ ಲಕ್ಷಗೊಡಿರಿ!!
ಅಗತ್ಯದ ಸೂಚನೆ.
ಪದ್ಮ ಜಾಲತಿಯಲ್ಲಿ ಇಲ್ಲದ ವಿಕ್ಟೋರಿಯಾ, ವಿಲಿಯಂ, ಶಂಡೆರಾಣಿ ಛಾಪೆಯ ರೂಪಾಯಿ, ಅರ್ಧ ರೂಪಾಯಿ ಮತ್ತು ಗೋವಾ, ಅಲ್ವಾರ ಬಿಕಾನೇರ ಸ್ಟೇಟಿನ ರೂಪಾಯಿ ವಗೈರೆ ನಾಣ್ಯಗಳು ಯೋಗ್ಯ ದರದಿಂದ ಕೊಳ್ಳಲ್ಪಡುವವು.
— ಇಂದೇ ವಿಚಾರಿಸಿರಿ. —
ದಿ ನ್ಯೂ ಸಪ್ಲಾಯ ವಿಜನ್ಸ್, ಕುಮಟಾ.

ಊಟದ ಹೊಸ ವ್ಯವಸ್ಥೆ!

೬ ರೂ.	೬೦ ಊಟ	.....	೫ ವಾರ
೪ "	೪೦ "	.....	೨೦ ದಿನ
೩॥ "	೦೫ "	.....	೧೦ ದಿನ
೧ "	೫ "	.....	೩ ದಿನ

೦—೪—೦ ಗೆ ಊಟ ೦.

ಮೆನೇಜರ— ಮೋರ್ಡರ್ ಹಿಂದೂ ಹೋಟೆಲ್, ಕುಮಟಾ.

ಅನಾಂತರ ವಾರ್ತೆಗಳು.

— ಬಂಗಾಲ ಸರಕಾರದವರು ರವಿವಂಸ್ಯಾರ ಸಂಸೆಯನ್ನೊಂದು ವಿಸರ್ಡಿಸಿಬ್ಬಾರೆ. ಅಕ್ಕುಶ್ಮಕ ವಿಮಾನ ದಾಳಿಯಿಂದ ನತ್ತವರ ರವಣಳಿಗೆ ಲಗಬಗೆಯಿಂದ ಉತ್ತರ ವಿಧಿ ಮುಗಿಸುವುದೇ ಈ ಸಂಸ್ಥೆಯ ಉದ್ದೇಶ

— ವಿಮಾನ ದಾಳಿಯಾದರೆ ಜನರು ಗಾಬರಿ ಮಾಡಿ ಹೊರಹೋಗಿ ಗುಂಪು ಕಟ್ಟಿ ನಿಲ್ಲಲೂಗದು; ಆ ರಿಂದ ವ್ಯಾಪಾರಹಾನಿ ಮಿಗಿಲಾಗುತ್ತದೆ. ರಂಗೂನಿನ ವಿಮಾನ-ದಾಳಿಯಾದಾಗ ಜನರು ಗಾಬರಿ ಮಾಡಿ ರಿಂದ ೬೦ಕ್ಕೆ ಮಿಕ್ಕ ಜನರು ಭಾಯಗೊಂಡರು ಆದರಿಂದ ವಿಮಾನ-ದಾಳಿಯು ಸೂಚನೆಯಾದೊಡ ಜನರು ಹೊರಹೋಗಬಾರದು. ಒಳಗೆ ಉಳಿದ ಮುಸುಕುಹಾಕಿಕೊಂಡು ಮನೆಗೆ ನಿಲ್ಲಬೇಕು. ಭೂಸಿ ಯಿದ್ದವರು ಕಂದಕಗಳನ್ನು ತೋಡಿ ಇಡಬೇಕ.

ವಿಮಾನ-ದಾಳಿ ನಡೆಯುತ್ತಿದ್ದಾಗ ಅವ್ಯಗಳಲ್ಲಿ ನೇ ಮನೆ ಮಾಡಿಕೊಂಡು ಓದುಬೆ ಉಳಿಯಬೇಕ ಬಾಂಬಿನ ಸ್ಫೋಟವನಿಡೊಡನೆ ಕಬ್ಬುಣದ ಸಣ್ಣ ತುಂಡುಗಳು ಸುತ್ತುಮುತ್ತಲೂ ವಾಯ ವೇಗದಿಂದ ಹಾರುತ್ತವೆ. ಅವು ಸ್ವಲ್ಪ ತಾಗಿದ ಕೂಡಲೆ ಅಲ್ಲಿಂದಲ್ಲೇ ವ್ಯಾಪಾರೋತ್ಪಾದನವಾಗುತ್ತ ೨ ಜಿಡಿ ದಕ್ಷ ಉಸುವಿನ ಚೀಲಗಳ ಗೋ ಇಲ್ಲವೆ ಅಪ್ಪೆ ದಪ್ಪವಾದ ಇಟ್ಟಂಗಿಗಳ ಗೋಡೆ ಮನೆಗೆ ಸಿಂಕರೆ ಆ ಬಾಂಬಿನ ತುಂಡುಗಳು ಗೋ ಭೇದಿಸಿ ಹೋಗುವದಿಲ್ಲ ಆದ್ದರಿಂದ ಇಂಥ ರಕ್ಷಣ ಲಯಗಳನ್ನು ಜನರು ವರ್ಪಡಿಸಿಕೊಡಿಡಬೇಕ ಹೀಗೆ ಹಿಂಮಸ್ಥಾನ ಸರಕಾರದವರೂ ಕಲಕತ್ತೆಂ ಪೋಲೀಸ ಕಮಿಶನರರೂ ಪ್ರಕಟಣೆ ಹೊರಡಿ ನಿಶ್ಚಿತ್ತ ಪ್ರಜೆಗಳಿಗೆ ಆತ್ಮರಕ್ಷಣೆ ಮಾಡಿಕೊಳ್ಳ ನಲಹೆ ಕೊಟ್ಟಿರುತ್ತಾರೆ.

—ಕಳೆದ ಖಾ. ೨೬ ನೇಗೆ ದೇವ ಭಾ ಬಾನಾಸಾಹೇಬ ಬೇ ರವರ ಪಶ್ಚಲೆಂದಲ್ಲರುವ ಧೂತಾವತೇಶ್ವರ ದೇವಸ್ಥಾ ಜಾತಿಗೆ ಭಟ್ಟಿ ಕೊಟ್ಟಾಗ, ಕಾರಬಾನೆಯಲ್ಲಿ ತೋಲಬ ಸ್ಥಗಿತಗೊಳ್ಳೂ, ದಿವಧಗಳನ್ನು ತಯಾರಿಸುವ ಶಾಸ್ತ್ರಬು ಕ್ರಮಗಳನ್ನೂ, ಕಾರ್ಯದರ್ಶಿಸ್ಥಾನವನ್ನೂ ನೋಡಿಕೆ ಹು ಅಕಸ ಸಮಾಧಾನಪಟ್ಟರು. ಇಲ್ಲ ದೊಡ್ಡ ಪಿ ಕಾರಬಾನೆಯು ಹಿಂದುಸ್ಥಾನದಲ್ಲಿ ಬೇರೊಂದು ಇಲ್ಲವಂ ಇಲ್ಲ ರಲ್ಲಿ ಈ ಕಾರಬಾನೆ ಸ್ಥಾಪಿಸಲ್ಪಟ್ಟಿಕ್ಕು.

ಪೂರ್ಣವಾದ ಹೊಲಿಗೆಯ
(TAILORING) ಪುಸ್ತಕ.

ಈಗ ಶಾನೇ ಪ್ರಕಾಶವಾ
ಪಿ. "ಜೆಂ ಸಿನ್ಹಿಮ್ ಆಫ್ ಕಟಿಂಗ್" ಪುಸ್ತಕದ ಕನ್ನಡ
ಭಾಷಾಂತರ. ಇತ್ತೀಚಿನ ಸ್ಟೈಲ್‌ಗಳನ್ನು ಕೊಟ್ಟಿವೆ. ೨೦೦ಕ್ಕೆ ಮೇಲ್ಪಟ್ಟು ಚಿತ್ರಗಳವೆ. ಇಂಡಿಯಾ, ಯುರೋಪುಗಳಲ್ಲಿ ನಾನು ೪೪ ವರ್ಷ ದೊರೆತಿಸದ ಅನುಭವದ ಫಲವಿದು. ಈ ಪುಸ್ತಕವೊಂದು ಆಸ್ತಿ ಕೂಲಿಗೆಯವರಿಗೆ ವರಪ್ರಸಾದ. ಸ್ಯಾರಂಭಕಾರರಿಗೆ ಸಂಸಾರಿಗಳಿಗೆ ಒಳ್ಳೇ ವಾರ್ಗದರ್ಶಿ. ಬೆಲೆ ೫ ರೂಪಾಯಿ. ಪೋಸ್ಟೇಜ ಪ್ರತ್ಯೇಕ. ಆರ್ಡರಿನೊ ಜತೆ ಮುಂಗಡ ಹಣ ಆಗತ್ಯ.
ಸಂಪಿಗೆ ಶಾನುಭಾವ್,
143. ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ.

ವಾರ್ತೆ.

ಕೂಡಲೆ ವರೆಗೂ ಬಹು ದೊಡ್ಡ ಸರಕಾರದವರು ಹಿಂದು ವ್ಯವಹಾರವು ವಿಷಯದಲ್ಲಿ ತಲೆ ಹಾಕಿ ಸಲು ಮಂದೋಲ್ಮದ ಪ್ರತಿಬಂಧವನ್ನು ಹಿಂತೆಗೆದು ಕೊಳ್ಳಿಲ್ಲ ಅಧಿಪೇಶನಕ್ಕಾಗಿ ಹೊರಟ ಸಿಯೋಜಿತ ಆಪೆಷ್ಟೆ ಸ್ವತಂತ್ರೃಸೀರ ಎನ್ನಾಯಕರಾದ ಸರದಾರ್ ಡಾ! ಮುಂಬೈ, ಬ್ಯಾಂಕರನಾಗಿ ಬಂತಿ ಬದ ಹಿಂದಣ ಮಂತ್ರಿಗಳಾದ ಶ್ರೀ ಗೋಕುಲ ಚಂದ್ ನಾರಂಗ್, ಕಾರ್ಯದರ್ಶಿ ಡಾ| ಪರಮಾಂಲು ನಾಯಡು ವರ್ಗದ ಪ್ರಮುಖರೂ ಪ್ರತಿನಿಧಿಗಳೂ ಭಾಗಲಪುರಕ್ಕೆ ತಲ್ಪುವ ಮುಂಚೆಯೆ ಹಾದಿಯಲ್ಲಿ ಪ್ರಾಂತ ರಕ್ಷಣಾ ಕಾನೂನಿನ ಈ ಅಜ್ಞನೆ ಬಳಿಯನ್ನು ಸ್ಥಳು ಸೆರೆಹಿಸಿಯಲ್ಪಟ್ಟರು! ಅಧಿವೇಶನಕ್ಕಾಗಿ ಹಾಕಿದ ಮಂಟಪವನ್ನೂ ಆಫಿಸರ್‌ಗಳು ಮುಂತಿ ತೆಗೆದರು! ಭಾಗಲಪುರದಲ್ಲೂ ಭಗಲ್ಪುರಕ್ಕೆ ಹೋಗುವ ರಸ್ತೆಗಳಲ್ಲಿ ಪೋಲೀಸ್ ಸನ್ನದ್ಧವಾಲಿದ್ದಾಗ್ಯೂ ಜಲಸಲವು ಸ್ವಯಂಸೇವಕರೂ ಲಂಗಲಪುರವನ್ನು ಸಾರಿ ತ ಟ್ಟಾಗಿ ಭಾಗಲಪುರದ ಬೇರೆ ಬೇರೆ ಭಾಗಗಳಲ್ಲಿ ಸಭೆ ಕೂಡಿಸಿ ೬ ರಜಿಂಗಳನ್ನು ಮಾಡಿದರು ಈ ರೀತಿಯಲ್ಲಿ ಸಿದ್ಧವಾಡಿಸಲ್ಪಟ್ಟಿದ್ದವು ಸಭಿಕರು ಸೇರುವುದೇ ಸಿದ್ಧವಾಡಿಸಲ್ಪಟ್ಟಿದ್ದವು ಸಭಿಕರು ಸೇರುವುದಕ್ಕೆ ಸಿದ್ಧವಾಗಿದ್ದ

Reg. No. B 1270. Monday, 12th January, 1942

ವರ್ಷ ೨೪

ಪತ್ರದ ವರ್ಗಣಿ.

ಕುಮಟಿಯಲ್ಲಿ ಆಗಾವಿ
ರೂಪಾಯಿ 2-4-0.
ಮುನಿಯಾಡಳ್ಳರಿಗಿಂತ
ರೂ 3-1 0.
ಪ್ಲಿ ಪಿ. ಆಂಜೆನೆಪ್ಟ್ ಸೇರಿ
ರೂಪಾಯಿ 3-4-0.
ಪ್ರತಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

ಕಾನಡಾವೃತ್ತ.

THE KANARA NEWS

ನೀರ್ಪಕ್ಷಪಾತಿಹಿತಕರೀ ಕೈಕ್ಷಾಂ ಯಾತಿ ಲೋಕೇ ಜನಪದಹಿತಕರೀ ಸ್ವಕಥನೇ ಪಾರ್ಥಿವೇಭ್ಯಃ।
ಇತಿ ಜಾತಿ ವಿರೋಧೇ ಜನಮನೇ ಸಮಾನೇ ನೃಪತಿಜನಪದಾನಾ ತುಲ್ಯಮ ಕಾರ್ಯಕರ್ತಾ ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಸಂಚಿಕೆ ೨೭

ಜಾಹೀರಾತುಗಳ ದರ.
ಕನ್ನಡ, ಇಂಗ್ಲಿಷ ಸ್ಥಳಾ
ಮ್ಯಪಿನ (೧೫ ಎಮ್ ಉದ್ದ)
ಆ ಸಾಲುಗಳವರೆಗೆ ರೂ.1-8 0
ಆ ನಂತರ ಪ್ರತಿಸಾಲಿಗೆ 0-1-0
ಹತ್ತಿಂಗಡೆ ಸಾಲು ಎಷ್ಟು
ದೊಡ್ಡವಿರುವದೋ ಆ ಪ್ರಕಾ
ರಿಂದ ಅಷ್ಟು ಸಾಲುಗಳು ಒಂದಿ
ಯಲ್ಲುತ್ತುವು
ಬಾಕಿ ಜಾಹಿರಾತುಗಳ ಬಗ್ಗೆ
ಪತ್ರವ್ಯವಹಾರ ಯಾ ಸಮಜಸ್ಕ ತಿಳಿ
ಸಲ್ಪಡುವದು.

-*(ಕುಮಟಾ— ಕಾನಡಾವೃತ್ತ, ಸೋಮವಾರ. ಕಾರೀಪು ೧೭ ಮಾಡೆ ಜನವರಿ ಸನ್ ೧೯೪೨ನೇ ಇಸವಿ)*-



ಶ್ರೀ ಧೂತಪಾಪೇಶ್ವರ ಏಜನ್ಸೀಜ, ಲಿ.,

ಕರ್ನಾಟಕ ಕೇಂದ್ರ - ಯುನ್ಯಾಟೆಡ್ ಏಜನ್ಸೀಜ, ಹುಬ್ಬಳ್ಳಿ.

ಕಾರವಾರ— ಮೆಸರ್ಸ ಮುಜಾವುದಾರ್-ಕಶಬೇಕರ ಬ್ರದರ್ಸ.
ಅಂಕೋಲಾ:— ದಿ ಸ್ವೇಶವರಿ ಡಿಪೋ
ಕುಮಟಾ:— ದೇವಪ್ಪಾ ಅಯ್ಯ ನಾಯ್ಕ.
ಹೊನ್ನಾವರ— ಮೆಸರ್ಸ ಕಲ್ಯಾಣಪುರ ಬ್ರದರ್ಸ.
ಶಿರಸಿ:— ಶಿರಸಿ ಡ್ರಗ್ ಸ್ಟೋರ್ಸ, ಎಸ್. ಎಲ್. ಧಾರೇಶ್ವಾ ಎಂಡ್ ಸನ್ಸ
ಸಿದ್ದಾಪುರ — ಮೆಸರ್ಸ ಶಾಮಯ್ಯನ ಬ್ರದರ್ಸ
ಹಳಿಯಾಳ:— ಎನ್. ಪಿ ಹಳ್ಳೇಕರಿ.

"ನ್ಯಾರ ಆಫ್ ಕೆನರಾ ಪ್ರೆಸ್",

ಕುಮಟಾ.

—*—

ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲಿಷ, ಗುಜರಾತಿ ಭಾಷೆಯಿಂದ ಬೇಕಾವ ನಮೂನೆಯ ಕಲರ ಪ್ರಿಂಟಿಂಗ ವರ್ಕೆರೆ ಸಣ್ಣ ದೊಡ್ಡ ಭಾವಾ ಕೆಲಸಗಳೂ, ಪುಸ್ತಕ ಮುದ್ರಣವೂ, ರೂಲಿಂಗ ಬೈಂಡಿಂಗ ಕೆಲಸವೂ ಉತ್ತಮವಾಗಿ ಸುಲಭ ದರವಲ್ಲಿ ತಕ್ಕ ಕಾಲಕ್ಕೆ ತಯಾರಿಸಿ ಕೊಡಲಾಗುವದು.

ಇದಲ್ಲದೆ ಕೋರ್ಟ ಕಛೇರಿ ಉಪಯೋಗದ ವಜಾಲತ ವರ್ಕೆರೆ ಫಾರ್ಮುಗಳೂ, ಕಸ್ಟಮ್ ಕಚೇರಿಯ ಶಿಪ್ಪಿಂಗ ಬೀಲು-ಸತ್ತಿ ವರ್ಕೆರೆ ಫಾರ್ಮುಗಳೂ, ಗೇಣಿ ರಶೀದಿ ಬೂಕು, ಗೇಣಿಚೀಟಿ ಎದುರ್ನಾಡಿ ಫಾರ್ಮುಗಳೂ ವರ್ಕೆರೆ ಮಾರಾಟಕ್ಕೆ ತಯಾರ ಸಿಗುತ್ತವೆ

ನಮ್ಮ ಭಾವಾ ಕೆಲಸಗಳನ್ನು ನಮ್ಮಲ್ಲಿಸೇ ಕಳಿಸಿರಿ

ಒಮ್ಮೆ ಅನುಭವ ತಕ್ಕೊಂಡು ನೋಡಿರಿ !

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

(ಡ್ರೆಡಿಕ ಹಿಂದುಸ್ಥಾನದಲ್ಲಿ ಸಂಘಟಿತವಾದದ್ದು)

ಹೆಡ್ ಆಪೀಸು — ಕುಂದಾಪುರ.

ಬ್ರೆಂಚ ಆಫೀಸುಗಳು - ಅಂಕೋಲಾ, ಕುಂದಾಪುರ ಬೈಂದೂರು, ಕೋಟೇಶ್ವರ, ಕುಮಟಾ, ಗೋಕರ್ಣ, ಕಾರವಾರ, ಹಾವೇರಿ, ಶಿವಮೊಗ್ಗಾ, ತರೀಕೆರೆ, ನಗರ, ಸೋಮವಾರಪೇಟೆ ಮತ್ತು ವೀರರಾಜಪೇಟೆ

ಕಾಯಂ ರೇವುಗಳು, ಸೇವಿಂಗ್ಸ ಬೇಂಕ್ ರೇವುಗಳು ಮತ್ತು ಚಾಲು ರೇವುಗಳು ಸಹ ಅಂಗೀಕರಿಸಲ್ಪಡುವವು.

ಭಂಗಾರದ ಪಾಗಿನೆಗಳ ಪ ಇತರ ವ್ಯಾಪಾರದ ವಸ್ತುಗಳಿಗೆ ಅವಶ್ಯಕತೆಗೆ ತಕ್ಕಷ್ಟು ಸುಲಭ ಪ್ರತಿನ ದರದ ಬಡ್ಡಿಯಲ್ಲಿ ಸಾಲ ಕೊಡಲ್ಪಡುವದು

ವ್ಯಾಪಾರದ ಕೇಂದ್ರಗಳಿಗೆ ಡ್ರಾಫ್ಟುಗಳು, ಚಕ್ಕುಗಳು ಸಹ ಕೊಡಲ್ಪಡುವವು ಎಲ್ಲ ಕರದ ಬೇಂಕಿನ ವ್ಯವಹಾರಗಳು ಸಲಲಿತ್ತಿನ ದರದಿಂದ ಪಡಿಸಲ್ಪಡುವವು

ಕುಂದಾಪುರ,
1-8-1941

The Agricultural & Industrial Bank, Ltd.

ಸ್ಥಳಿಕ ವಿಷಯಗಳು.

ಲೇಖಕ.- ಸ್ಥಳವಂತಿಕ

ಮುಂಬಯಿ ಸರಕಾರವು ನಮ್ಮ ಜಿಲ್ಲೆಯಲ್ಲಿ ಮಾಮಲೇದಾರ-ಸಬಜಜ್ಜರನ್ನು ನೇಮಿಸುವ ಪೂರ್ವ ರಣ ಪ್ರಶ್ನೆಯಿರುವದಿಲ್ಲ. ನಮ್ಮಾ ಜಿಲ್ಲೆ ಕನ್ನಡ ಜಿಲ್ಲೆ ಕನ್ನಡ ಭಾಷೆಯೇ ಇಲ್ಲಿಯ ಜನರ ಮುಖ್ಯ ಭಾಷೆ ಕೋರ್ಟು-ಕಚೆ ರಿಗಳಲ್ಲಿ ನಡೆಯುವ ಭಾಷ ಇದೆ ಆದರೆ ಈ ಭಾಷೆಯ ಗಂಧ-ಗಾಳಿಯಿಲ್ಲದವರಿಗೆ ಮಾಮಲೇದಾರ-ಸಬಜಜ್ಜರಾಗಿ ನೇಮಿಸಲ್ಪಡುತ್ತಿರ ಕಾರವಾರದ ಮಾಮಲೇದಾರರಾದ ರಾ॥ ಕೆರ ಜುಂಕೋಲೆಯ ಸಾಮಲೇದಾರರಾದ ರಾ॥ ಡಿಗಿ ಜ ಇವರಿಗೆ ಕನ್ನಡ ಬರುವದಿಲ್ಲ, ಅವರು ಮಂರಾಠಿ ಪ್ರೆಸ್ಟೆ ಯವರು ಕುಮಟೆಯ ಮಾಮಲೇದಾರರಾದ ರಾ॥ ಲಂಬಾಟೆಯವರೂ ಪುರಾರಿ ಜೆಲ್ಲೆಯವರೇ ಆದರ ಇತ್ತೆಲಾಗಿ ಯಲ್ಲಾಪುರ ಕುಮಟೆಗಳಲ್ಲಿ ಕಲಸ ಮಾ ಡುತ್ತಿರುವಾಗ ಕನ್ನಡ ಬದು-ಬರಪಗಳನ್ನು ಕಲಿತು ಕೊಂಡಿದ್ದಾರೆ ಶಿರಸಿಯಲ್ಲಿ ರಾ॥ ಕುಮಾರರು ಮಾವಲೀದಾರರಿದರು ಅವರಿಗಾಗ ವರ್ಗವಾಗಿದೆ ಅವರ ಸ್ಥಳದಲ್ಲಿ ರಾ॥ ಅಪಟೆ ಎಂಬ ಕನ್ನಡ ತಿಳಿ ಯವ ಮರಾಠಿ ಮಾಮಲೇದಾರರು ನೇಮಿಸಲ್ಪಟ್ಟಿದ್ದಾರೆ! ಸಬಜಜ್ಜರನ್ನು ನೇಮಿಸುವ ವಿಷಯದ ಲ್ಲೂ ಇದೇ ವಿಷಮತೆ ಕುಮಟೆಯ ಸಹಜಜ್ಜರಾದ ರಾ॥ ಶಿಖರೇಯವರು ಪುಕೆಯವರು, ಕನ್ನಡದ ಗಂಧ ಗಾಳಿಯಿಲ್ಲದವರು. ಹೊನ್ನಾವರದ ಸಬಜಜ್ಜ ರಾದ ರಾ॥ ಲಾಸನೇಯವರು ಸೂಲ್ಲಾಪುರದವರು ಇವರಿಗ ಕನ್ನಡ ಬರುತ್ತದೆಂದರೆ ಬರುತ್ತದೆ ಬರುವ ದಿಲ್ಲವೆಂದರೆ ಬರುವದಿಲ್ಲ! ಶಿರಸಿಯ ಸಬಜಜ್ಜರಾದ ರಾ॥ ಛಾಪ್ಕೆಕ್ಕರು ಸಹ ಇವೇ ಮಾದರಿಯವರು ಈ ಮೂಲಕ ಕೋರ್ಟು-ಕಚೆರಿಗಳಲ್ಲಿ ವ್ಯವಹರಿ ಸುವ ಜನಸಾಮಾನ್ಯರಿಗೆ ಬಹ ತೊಂದರೆಯಾಗು ತ್ತದೆ ಸಬಜಜ್ಜರೊಡನೆ ಜನರ ವ್ಯವಹಾರ ನಿಯ ಮಿತವಾದದ್ದು, ಮೇಲಾಗಿ ಮಧ್ಯಸ್ಥಿಕೆ ನಡಿಸಲು ವಕೀಲರಿರುತ್ತಾರೆ ಆದರೆ ಕಚೇರಿಗಳಲ್ಲಿ ಜನರು ತಮ್ಮ ನೆ ಮಾಮಲೇದಾರರು ಪ್ರತ್ಯಕ್ಷ ವ್ಯವಹಾರ ನಡಿಸ ಬೇಕಾಗುತ್ತದೆ ಉಭಯತರಿಗೆ ತಿಳಿಯುವ ಭಾಷೆಯ ಅಭಾವದಲ್ಲಿ ಜನರಿಗೆ ತೊಂದರೆಯಾಗುತ್ತದೆ ಆದ ರಿಂದ ಮುಂಬಯಿ ಸರಕಾರವು ಇತ್ತ ಕಡೆ ಮಾಮ ಲೇದಾರ ಸಬಜಜ್ಜರನ್ನು ನೇಮಿಸುವಾಗ ಕನ್ನಡಿಗ ರೊಡನೆ ವ್ಯವಹಾರ ಮಾಡಲಾಗುವಷ್ಟು ಕನ್ನಡ ಭಾ ಷೆಯ ಜ್ಞಾನವುಳ್ಳವರನ್ನೇ ನೇಮಿಸುವ ನಿಯಮವ ಸ್ಥಿಡಬೇಕು. ವ್ಯಕ್ತಿಶಃ ಯಾವದೇ ಮಾಮಲೇದಾರರ ಇಲ್ಲವೆ ಸಬಜಜ್ಜರ ನಡಾವಳಿಯ ಬಗ್ಗೆ ಆಕ್ಷೇಪವಿಲ್ಲ ತಮಗೆ ತಿಳಿದ ಮಟ್ಟಿಗೆ ಅವರು ನ್ಯಾಯದಾನವನ್ನು ಮಾಡುತ್ತಿದ್ದಾರೆ ಆದರೆ ಭಾ ಷೆ ತಿಳಿಯದ್ದರಿಂದ ಅನ್ಯಾಯವಾಗುವ ಪ್ರಸಂಗದಲ್ಲಿ ಅವರದೇನೂ ಉಪಾಯನಿರುವದಿಲ್ಲವಷ್ಟೇ

***

ನಮ್ಮ ಜಿಲ್ಲೆಯಿಂಗೆ ನಡೆಯುವ ಮನ್ಯಸಿರೋ ಧನದ ವಿಷಯ ಹೊರ ಪೂಸುಗಳು ಕಂಡುಬರು ತ್ತಿವೆ ಕಾರವಾರದಿಂದ ಭಟ್ಕಳದ ತನಕ ಕರಾವಳ ಪ್ರದೇಶದಲ್ಲಿ ಕ್ಯಾಟಿಕೆ ವಿನೇಸ ನಡೆಯುತ್ತಿದೆ ಗೋವಾಸಾತಕದಲ್ಲಿ ಮದ್ಯಕ್ಕೆ ನಿಧಿ ನಿಷೇಧವಿಲ್ಲ ಆದೊಂದು ಪಾಸಕವೆಂದು ಎಣಿಸಲ್ಪಡುತ್ತಿದೆ! ಚಹಾ ಪಾನಕ್ಕಿಂತ ಮದ್ಯಪಾನ ಆ ಪ್ರದೇಶದಲ್ಲಿ ಸಾಮಾನ್ಯ ಅಷ್ಟೆಂದ ದೋಣಿ ತುಂಬಿ ಸರಾಯಿ ನಮ್ಮ ಕಡೆ ಎಗುತ್ತಿರುತ್ತದೆ ಕಳ್ಳ ಸುಳ್ಳರು ಅವನ್ನು ಮರೆಯಲ್ಲಿ ಒ ವ್ಯಾಪಾರವನ್ನು ನಡಿಸುತ್ತಾರೆ ಕಾರ ವಂಂದಲ್ಲಿ ೩—೩ ಕೆಡೆ ಉಸುಬಿನ ರಾಶಿಯಲ್ಲಿ ಹುಗಿ ವಿಷ್ಟ ಸರಾಯಿ ಡಬ್ಬೆಗಳು ಸಿಕ್ಕಿದವು! ಆದರೆ ಅವ ನ್ನು ಹುಗಿದಿಟ್ಟವರ್ಯಾರೆಂದು ಈ ತನಕ ಪತ್ತೆಯಾ ಗಿಲ್ಲ! ಕುಮಟೆ ಹೊನ್ನಾವರಗಳಲ್ಲಿಯೂ ಇದೇ ಸ್ಥಿ! ಅಬಕಾರಿ ಅಧಿಕಾರಿಗಳು ಕೆಲ ಸುಳ್ಳರೊಡನೆ ಒಳಸಂಚು ನಡಿಸುತ್ತಾರೆಂದು ಅಲೋಪಳಿಗೆ ಇವರಿಗೆ ಯಮಾರ್ಥತೆಯನ್ನು ಪತ್ತೆ ಹೆಚ್ಚುವು ನ ಜನಸಾಮಾನ್ಯರಿಗೆ ಕಠಿಣ ಕೆಲಸ, ಒನ್ನು ಪತ್ತೆ ಹಚ್ಚಿ ದಾಗ್ಲೂ ಸಿದ್ಧ ಪಡಿಸುವುದು ದುರ್ಘಟವಾದದ್ದು! ಆಬ ಕಾರಿಗಳು ಪ್ರಾಮಾಣಿಕರಿಗೆ ಕೆಲ ಮಹಾ ಜನರಿಗೆ ಒತ್ತಟ್ಟಿಗೆ ಸೇರಿ ಮದಿರಾಪೇಕ್ಷಿಯ ಆರಾಧ ನೆ ಮಾಡುತ್ತಾರಾಗಿ ಸಹ ವಾರ್ತೆಯುಂಟು! ಕ್ಷೇತ್ರ ಸ್ಥಳಗಳಲ್ಲಿ ಸಹ ಇಂಥ ಅಪವಿತ್ರ ಕರ್ಮಗಳು ನಡ ಯುತ್ತವೆಂದು ಲೋಕವಾರ್ತೆಯುಂಟು! ಇಡೀ ರಾತ್ರಿ ಮದಿರಾಶಕ್ತರಾಗಿ ಮಾರ್ಗಗಳ ನೆಲೆ ಹೊರ ಳಾಡುವ ದೊಡ್ಡವರನ್ನು ಅನೇಕರು ಕಂಡು ಪರಿ ಹಾಸ್ಯ ಮಾಡಿದ ವಾರ್ತೆ ಸಹ ಹೆಚ್ಚು ಕೊಂಡಿದೆ ಅಧಿ ಕಾರಿಗಳು ಅಪವಿತ್ರರೆಂದು ಹೇಳುವದು ಕಠಿಣ, ಆದ ರೆ ಪವಿತ್ರರೆಂದು ಹೇಳಲಿಕ್ಕೆ ಮನಸ್ಸು ಒಪ್ಪುವದಿಲ್ಲ ತಿರಿಂದ ಮದ್ಯಪಾನದ ಚಟವುಳ್ಳವರನ್ನು ಮದ್ಯ ನಿರೋಧನ ಅಧಿಕಾರಿಗಳನ್ನಾಗಿ ನೇಮಿಸುವದೇ ದೊಡ್ಡ ತಪ್ಪು ಮದ್ಯಪಾನ ಚಟದ ಅಧಿಕಾರಿಗಳಿಗೆ ಒನೇ ಚಟವುಳ್ಳ ಊರೊಳಗಿನ ಮಹಾನುಭಾವರ ಗೆಳೆತನ ಗಂಟುಬೀಳುತ್ತದೆ! ಈ ದೊಸ್ತಿಯಿಂದ ಪಾನ-ಕೂಟಗಳು, ಭೋಜನ ಕೂಟಗಳು ಒಡಗಿ ಬರುತ್ತವೆ! ಮತ್ತು ಊರೊಳಗಿನ ಮಧ್ಯ ವರ್ತಕ ರೊಡನೆ ಸಂಬಂಧ ಬೆಳೆಯುತ್ತದೆ! ಇದಕ್ಕಲ್ಲ ವೆಂತಿಂದೆಯಾಗಿ ಲಂಚ, ವಂಚನೆ ಮೊದಲಾದ ಭ್ರಷ್ಟಾಚಾರಗಳೂ ನಡೆಯುತ್ತವೆ! ಅಪರಾಧಗಳ ಸಂಖ್ಯೆಯನ್ನು ಬೆಸುವದಕ್ಕಾಗಿ ಸಿರಕರಾರಿ ಗಳಿಗೆ ಇಷ್ಟಿನೆ ಲಜ್ಜೆ. ಕುಡುಕರಿಗೆ ಮೋಸಗೊಳಿಸಿ ಖಟ್ಟಿಗ-ನ್ನು ಉರ್ಮಿಸುವ ದುರ್ವ್ಯಾಪಾರ ಸಹ ನಡ ಯುತ್ತದೆ! ಸರಕಾರವು ಇದನ್ನೆಲ್ಲ ಸಮಾಲೋಚಿಸಿ ನನ್ನು ಜಿಲ್ಲೆಯೊಳಗೆ ೩ ಳ ಮಂದಿ ಗುತ್ತ ವೋಲಿಸ ರಕ್ಷಿಸಿ ಕಳುಹಿಸಿ ಸೌಖ್ಯದಿಂದ ಅಬಕಾರಿ-ಪೋಲಿಸ ಅಧಿಕಾರಿಗಳ ನಡಾವಳಿಯನ್ನು ಪರೀಕ್ಷಿಸತ್ಕಕ್ಕದ್ದು ಈಗಿನ ಅಧಿಕಾರಿಗಳ ಅತಂತೆ ಈಗಿರಂತೆಯೇ ಇದ್ದರೆ ಮದ್ಯನಿರೋಧನ ಪ್ರದೇಶವು ಮದ್ಯಸಿಗಳ ರಾಜ್ಯ ದಲ್ಲಿ ರೂಪಾಂತರ ಹೊಂದುವ ಭೀತಿಯುಂಟು

***

ನವ್ಯಲ್ಲಿಯ ಗ್ರಾಮೋದ್ಯಾರ ಮಂಡಳಿಯ್ಕೊಂದು ಸೂಚನೆ ದೆಹರಾಡೂನದೊಳಗಿನ ಸರಕಾರಿ ವನಸಂಶೋಧನೆ ಇಲಾಖೆಯವರು ವರ್ತಮಾನ ಪತ್ರಗಳಗ ತಗಲುವ ಕಾಗದ ಮಾಡಲು ಯೋಗ್ಯವಾದ ತಿರುಳನ್ನು ಸಂಶೋಧಿಸಿದ್ದಾರೆ ಬಿದು ರುಗಳಿಂದ ಇವು ತಯಾರಾಗುತ್ತದಾಗಿಯೂ ಅಂಥ ಬಿದುರು ನಮ್ಮ ಹಿಂದುಸ್ತಾನದೆಲೆಗಳಿ ವಿಪುಲ ದೊರ ಕುತ್ತದಾಗಿಯೂ ಸಂಶೋಧನ ಇಲಾಖೆಯ ಅಭಿಪ್ರಾ ಯವುಂಟು ಸಂಶೋಧನ ಇಲಾಖೆಯ ಕಾಗದ ವಿಭಾಗದವರು ಸಣ್ಣ ಯಂತ್ರದ ಮೇಲೆ ಕಾಗದವನ್ನು ತಯಾರಿಸುತ್ತಾರಾಗಿ ಪ್ರಕಟವಾಗಿದೆ ಬಿದುರಿನಿಂದ ಲೂ ಜಾತಿಯ ಕಟ್ಟಿಗೆಯಿಂದಲೂ ಕಾಗದ ತಯಾ ರಿಸಬರುತ್ತದಾಗಿ ತಿಳಿಯುತ್ತದೆ ನಮ್ಮಾ ಜಿಲ್ಲೆಯೊ ಳಗೆ ಕೈಗಾರಿಕೆಗಳಲ್ಲ ಬೇನಾಯದಿಂದಲೇ ಇಡೀ ವರ್ಷ ಹೊಟ್ಟೆ ಹೊರಲಾಗುವದಿಲ್ಲ ಯಾವದೊಂದು ಕೈಗಾರಿಕೆ ಬೇಕು. ಈವಾಗ ಕಾಗದ ದುರ್ಲಭವಾ ಗಿದೆ. ಹೆಚ್ಚು ದುಡ್ಡು ಕೊಟ್ಟರೂ ಕಾಗದ ಸಿಗುವ ದಿಲ್ಲ ಕಾಗದವನ್ನು ಕೃಪಣತನದಿಂದ ಖರ್ಚು ಮಾಡಬೇಕಾಗಿ ಸರಕಾರವು ಕಡೆಕಾಯವರೂ ಜನಸಾಮಾನ್ಯರಿಗೂ ಅಪ್ಪಣೆಗಳನ್ನು ಹೊರಡಿಸಿದೆ ವರ್ತಮಾನಪತ್ರಗಳು ತಮ್ಮ ಪುಟಗಳ ಸಂಖ್ಯೆ ಯನ್ನು ಸಂಕೋಚಗೊಳಿಸುತ್ತಿದ್ದಾರೆ. ಕಾಗದದ ದರ ವಿಪರೀತ ವಿರಿಕೊಂಡದ್ದರಿಂದ ವರ್ತಮಾನಪತ್ರ ದವರಿಗೆ ಬಹಳ ಸಂಕಟವಾಗಿದೆ ಹೆಚ್ಚಿತ್ತು ಯುದ್ಧ ವಾರ್ತೆಗಳನ್ನು ಓದಲು ಜನರು ಕುತೂಹಲಪಡುವ ದೇನೋ ಸಹಜ. ಅವನ್ನು ಪೂರೈಸಿ ಜನಸೇವೆ ಮಾ ಡುವದು ಪತ್ರಕರ್ತರ ಕರ್ತವ್ಯ. ಆದರೆ ಕಾಗದದ ಆಭಾವದಲ್ಲಿ ನಿರುಪಾಯವಾಗುತ್ತದೆ! ನಮ್ಮಾ ಜಿಲ್ಲೆ ಯೊಳಗೆ ನೂರಾರು ನಮೂನೆಯ ವೃಕ್ಷಗಳಿವೆ, ಬೇರೆ ಬೇರೆ ಮಾದರಿಯ ಬಿದುರುಗಳಿವೆ ಸರಕಾರವು ನಮ್ಮಾ ಜಿಲ್ಲೆಯೊಳಗೆ ಕಾಗದ ಮಾಡುವ ಕಲೆಯ ನ್ನು ಜನರಿಗೆ ಕಲಿಸಿಕೊಟ್ಟರೆ ಬಹಳ ಉಪಕಾರವಾ ಗುವಂತಿದೆ ಗ್ರಾಮೋದ್ಯಾರ ಇಲಾಖೆಯವರು ಈ ಕಾರ್ಯದಲ್ಲಿ ಮುಂದಾಗಬೇಕು ಜೆಹರ್‌ಡೂನಿನ ವನ ಸಂಶೋಧನ ಇಲಾಖೆಯಿಂದ ಕಾಗದವನ್ನು ತಯಾರಿಸುವ ಕ್ರಮದ ಮಾಹಿತಿಯನ್ನು ತರಿಸಿ ಜಂಗಲ ಅಧಿಕಾರಿಗಳೊಡನೆ ವಿಚಾರವಿನಿಮಯ ಮಾಡಿ, ಕಾಗದ ತಯಾರಿಸುವ ಕೆಲಸವನ್ನು ಸ್ವಾರಂಭಿಸಬೇಕು ಕೆಲವು ಬಂಡವಲು ಅವಶ್ಯವಿದ್ದರೆ ಅದನ್ನು ಸರಕಾರವು ತಗಾವಿ ರೂಪದಿಂದ ಕೊಡ ಬೇಕು. ಬೇನಾಯ ಇಲಾಖೆಯವರು ಜೇನು ಸಾಕುವ ಪೆಟ್ಟಿಗೆಗಳನ್ನು ಹಂಚಿಕೊಟ್ಟು ಅವುಗಳ ಕ್ರಯ ವನ್ನು ಜೇನು ತುಪ್ಪದ ರೂಪದಿಂದ ವಸೂಲು ಮಾಡುವಂತೆ ಕಾಗದ-ಯಂತ್ರಗಳ ಬೆಲೆಯನ್ನು ಸರ ಕಾರವು ಜನರಿಂದ ವಸೂಲು ಮಾಡಿಕೊಳ್ಳಬಹುದು ಕಾಗದದ ಬೆಲೆ ವಿಪರೀತ ವಿರಿದ್ದರಿಂದ ಈ ಉದ್ದಿಮೆ ಯನ್ನು ಪ್ರಾರಂಭಿಸಲು ಈವಾಗ ಅನುಕೂಲ ಪರಿ ಸ್ಥಿತಿಯುಂಟು

***

ಬೆಳಗಾವಿ, ವಿಜಾಪುರ, ಧಾರವಾಡ ಮತ್ತು ನಮ್ಮ ಜಿಲ್ಲೆಗಳೊಳಗಿನ ಸೆಂಟ್ರಲ ಬೇಂಕುಗಳು ಒಟ್ಟುಗೂಡಿ ನಾಲ್ಕೂ ಜಿಲ್ಲೆಗಳಿಗೆ ಮಧ್ಯವರ್ತಿಯಾಗಿ ಒಂದು ಬೇಂಕನ್ನು ಹೂಡಿಸುವ ಯೋಜನೆ ನಡೆದಿದೆ. ಸದ್ಯ ಕ್ಕೆ ಸುರ್ಯಾ ಪೀರಿಕೆಯೆಂದು ಬೆಳಗಾವಿ, ಧಾರವಾಡ ವಿಜಾಪುರ ಈ ೩ ಜಿಲ್ಲೆಗಳೊಳಗಿನ ಸೆಂಟ್ರಲ ಬೇಂ ಕುಗಳು ಒಕ್ಕಬ್ಯಾಗಿ ಮೂವರಿಗೆ ಅನುಕೂಲವಾದ ವ್ಯವಹಾರ- ಕಾರ್ಯವನ್ನು ಮಾಡಿಕೊಂಡಿರುವಂತೆ ಸಹಕಾರಿ ಕಾನೂನಿನನ್ವಂತೆ ಸಹಕಾರಿ ಬೇಂಕುಗಳು ತಮ್ಮ ರವಣಾತಿಗಳನ್ನು ಮುಂಬಯಿ ಸ್ವಾಂತಿಕ ಸಹಕಾರಿ ಬೇಂಕಿನಲ್ಲಿಯೇ ಇಡಬೇಕು ಎಂಬ ವಿಧಿ ಯಂಟು ಚೆಕ್ಕುಗಳನ್ನು ಆ ಬೇಂಕಿನ ಪೀಲೆಯೇ ಹೊರಡಿಸಬೇಕು ಎಂಬ ಕ್ರಮವುಂಟು ಈ ಕ್ರಮದ ಮೂಲಕ ಯಾವದೇ ಜಿಲ್ಲೆ

ಜೊಳಗಿನ ಬೇಂಕುಗಳಿಗೆ ಜಿಲ್ಲೆಯ ಇತರ ಬೇಂಕುಗಳೊಡನೆ ಇಲ್ಲವೆ ಬೇರೆ ಜಿಲ್ಲೆಯ ಬೇಂಕುಗಳೊಡನೆ ವ್ಯವಹಾರ ಮಾಡಲು ಸಾಧ್ಯವಾಗುವದಿಲ್ಲ ಮತ್ತು ಎಲ್ಲ ಹಣ ಮುಂಬಯಿಗೆ ಹೋಗಿ ಬೀಳುತ್ತದೆ' ಮೇಲ್ಕಾಣಿಸಿದ ನಾಲ್ಕು ಜಿಲ್ಲೆಗಳು ಒಕ್ಕಟ್ಟಾಗಿ ಒಂದು ಮಧ್ಯವರ್ತಿ ಬೇಂಕನ್ನು ಹೊರಡಿಸಿದರೆ, ಈ ಕಡೆ ವ್ಯವಹಾರ ಮಾಡಲು ಅನುಕೂಲವಾಗುವ ಹಲ್ಲದೆ, ಹಣ ನಮ್ಮಲ್ಲಿಯೇ ಉಳಿದು ಆದರ ಪ್ರಯೋಜನ ಜನಗಳಿಗೆ ಸಿಗುವ ಹಾಗಿದೆ ಸಹಕಾರಿ ಬೇಂಕುಗಳಲ್ಲಿ ನಿರ್ಬಂಧಗಳು ಬಹಳ! ತ್ರಾವಣಕೋರದ ದಿವಾಣರಾದ ಸರ್ ಸಿ ಪಿ ರಾಮಸ್ವಾಮಿ ಅಯ್ಯರರವರು ತ್ರಾವಣಕೋರ ಸಹಕಾರ ಪರಿಷತ್ತಿನಲ್ಲಿ ನುಡಿದಂತೆ, ಸಹಕಾರಿ ಚಳವಳಿ ನಿರ್ದೇಶವಾಗಲು ಸರಕಾರದ ನಿರ್ಬಂಧಗಳೇ ಕಾರಣ ಈ ಪರಿಷತ್ತಿಗೆ ಮದ್ರಾಸದ ಸಹಕಾರ ಇಲಾಖೆಯ ರಜಿಸ್ಟ್ರಾರರು ಅಧ್ಯಕ್ಷರಿದ್ದರು ಅವರು ಈ ಅಭಿಪ್ರಾಯಕ್ಕೆ ತಲೆದೂಗಿದ್ದಾರೆ ಸಹಕಾರಿ ಸಂಘಗಳ ವ್ಯವಹಾರದಲ್ಲಿ ಪ್ರಾಮಾಣಿಕತೆಯನ್ನು ಕಾಪಾಡಲಿಕ್ಕೆ ಇಲ್ಲವೆ ಪ್ರಾಮಾಣಿಕತನವನ್ನು ಪುರಸ್ಕರಿಸಲಿಕ್ಕೆ ಸರಕಾರವು ತಕ್ಕ ಜಾಗ್ರತೆ ಕೊಳ್ಳಲಿಲ್ಲ ಅದೇ ಪ್ರಕಾರ ಪರಿಸ್ಥಿತಿಗನುಗುಣವಾಗಿ ಸಂಘಗಳ ವ್ಯವಹಾರವನ್ನು ನ್ಯಾಯಕಗೊಳಿಸಲಿಕ್ಕೆ ಸರಕಾರವು ಅಳ್ಳಿದ ಸಲ್ಲದ ನಿಬ್ಬಂಧನ್ನು ನಿರ್ಬಂಧಿತು ಬೇಗವಾಗಿ, ಧಾರವಾಡ ಡಿವಿಜಿಯಾಪುರದ ಬೇಂಕುಗಳು ಸಹಕಾರ ಇಲಾಖೆಯವರೊಡನೆ ವಿಚಾರವಿನಿಮಯ ಮಾಡಿ ಕೆಲವು ನಿರ್ಬಂಧಗಳನ್ನು ಪರಿಹರಿಸಿಕೊಂಡಿದ್ದಾರಾಗಿ ತಿಳಿಯುತ್ತದೆ ಸಹಕಾರ ಇಲಾಖೆಯವರು ಜಿಲ್ಲೆ-ಜಿಲ್ಲೆಗಳಿಗನ್ನ ಬೇಂಕುಗಳಲ್ಲೂ ಮಧ್ಯವರ್ತಿ ಬೇಂಕುಗಳ ಪ್ಲೂ ಪರಸ್ಪರ ವ್ಯವಹಾರ ಬೆಳೆಯುವಂತೆ ಉಪಾಯಯೋಜನೆ ಮಾಡಿದರೆಕ ಸಹಕಾರದ ಅಭಿವೃದ್ಧಿಯಾಗದು " The Cooperative movement has grievously failed in India and also in Travancote ' ಹಿಂದುಸ್ಥಾನದಲ್ಲೂ ತ್ರಾವಣಕೋರದಲ್ಲೂ ಸಹಕಾರ ಚಳವಳಿಯು ತೀರ ನಿರ್ದೇಶವಾಗಿದೆ, ಈ ರೀತಿ ದಿವಾಣರಾದ ಸರ್ ಸಿ ಪಿ ರಾಮಸ್ವಾಮಿ ಅಯ್ಯರರ ಮನೋನಿರ್ಣಯ ' On the whole the (cooperative) movement in India has woefully failed to come up to our expectations ಅಂತು ಈ ಚಳವಳಿಯು ಕುರಿತು ನಾವು ಮಾಡಿದ ಅಪೇಕ್ಷೆಗಳೆಲ್ಲ ನಿರರ್ಥಕವಾದವೆಂದು ಹೇಳಲು ವ್ಯಥೆಯಾಗುತ್ತದೆ" ಹೀಗೆ ಪರಿಪತ್ತಿನ ಅಧ್ಯಕ್ಷರಾದ ಮದ್ರಾಸದ ಸಹಕಾರ ಇಲಾಖೆಯ ರಜಿಸ್ಟ್ರಾರರ ಉದ್ಗಾರ ಸಹಕಾರದಿಂದ ಲೋಕಕ್ಕೆ ಉಪಕಾರವಾಯಿತೆಂದು ಹೇಳುವ ಸಹಕಾರರ ಪಾಪ್ರಿಗಳು ಈ ನಿರ್ಣಯಗಳನ್ನು ಲಕ್ಷಿಸಿ ಸಹಕಾರವನ್ನು ಪುನರ್ಘಟನೆ ಮಾಡುವ ಕಾಲ ಬೇಗ ಪ್ರಾಪ್ತವಾಗಲಿ. ಸಂಘಗಳ ಘಟಿಸೆಗಳನ್ನು ತಿದ್ದಿ ಅವುಗಳ ವ್ಯವಹಾರವನ್ನು ವ್ಯಾಪಕಗೊಳಿಸಬೇಕು

ಸಹಕಾರಿ ಸಂಘಗಳು ಆಕರಿಸುವ ಒಡ್ಡಿಯ ದರ ತೀರ ವಿಪರೀತವೂಂಟು. ಜಿನ್ನದ ಭದ್ರತೆಯ ಮೇಲೆ ಸಹ ಸಂಘಗಳು ಒಡ್ಡಿಯ ದರಕ್ಕೆ ಸಲೆಗೆ ಕಡಿಮೆಯಿಲ್ಲ! ಜಿನ್ನದ ಭದ್ರತೆಯೆಂದರೆ ಬೇರೆ ಪ್ರತಿಭೆಗಳಿಗಿಂತ ಉತ್ತಮ ಭದ್ರತೆ ಸರಕಾರದ ಸಾಲಗಳಿಗೆ ೩ ಸಲೆಗೆ ಮಿಕ್ಕೆ ಬಡ್ಡಿ ಎಲ್ಲಿಯೂ ದೊರೆಯುವದಿಲ್ಲ. ಸಂಘಗಳು ತಮ್ಮ ಹಣವನ್ನು ಸರಕಾರಿ ಸಾಲಗಳಲ್ಲಿ ಇಲ್ಲದೆ ತತ್ಸಮ ಸಾಲಗಳಲ್ಲಿ ತೊಡಗಿಸುತ್ತಿವೆ. ಹೊರತು ಜನಗಳಿಗೆ ಬಡ್ಡಿಯ ದರ ಕಡಿಮೆ ಮಾಡಲು ಒಡಂಬಡುವದಿಲ್ಲ! ಊರಿಗೊಳಿಸಿದ ಹಣವನ್ನು ಒಟ್ಟುಗೂಡಿಸಿ ಅದನ್ನು ಸ್ವಂತಾರ ಮಾಡುವದು ಸಹಕಾರದ ಉದ್ದೇಶವಲ್ಲ ಊರೊಳಗಿನ ಹಣವನ್ನು ಒಂದೆಡೆ ಕೂಡಿಸಿ ಉದ್ದಿಸುವವರಿಗಾಗಿರುವ ಊರವರಿಗೆ ಸಾಲವಾಗಿ ಕೊಟ್ಟು, ಊರನ್ನು ಋಣಭಾವನೆಕ್ಕೆಗೆ ತರುವದೇ ಸಹಕಾರದ ಉದ್ದೇಶವಿದೆ ಸಹಕಾರಿ ಸಂಘಗಳಲ್ಲಿ ಕೂಡಿಸಿದ ಹಣವನ್ನು ಒಟ್ಟುಗೂಡಿಸಿ ಆ

ಕಾನಡಾವೃತ್ತ.

ಮಿತ ವೈಸ ಸಂತಸ್ಸರ ಪುಷ್ಯ ಶ್ಯಾ ೧೦೮೫, ಸೋಮವಾರ.

ಸಾಮ್ರಾಜ್ಯಕರ್ತರು ತ್ವರೆಮಾಡಬೇಕು!

ಲಂಡನ್ನಿನ 'ಮೆಂಚೆಸ್ಟರ ಗಾರ್ಡಿಯನ್' ಪತ್ರಿಕಕರ್ತರು ಬರೆದಂತೆ ಯುದ್ಧೋತ್ಸರ ಸಾಮ್ರಾಜ್ಯ ಸರಕಾರವು ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಕೊಡಲು ಸಿದ್ಧವಿರುವದಾಗಿ ನಮ್ಮಮೂ ಅಭಿಸ್ರಾಯವ್ಯಂಟು. ಈ ರಾಜ್ಯಾಧಿಕಾರವನ್ನು ಇದೀಗಲೇ ಒಪ್ಪಿಸಲು ಆಡ್ಡಿಯೇನಿದೆಂದು 'ಗಾರ್ಡಿಯನ್' ಪತ್ರಿಕತ ಪು ಕೇಳುತ್ತಾರೆ. ನಾವು ಕೇಳುವ ಪ್ರಸ್ನೆಯಾದರೂ ಆದೇ. ರಾಜ್ಯಾಧಿಕಾರಗಳನ್ನು ಇದೀಗಲೇ ಸರ್ವಸ್ವಿ ಸಿದರೆ ಹಿಂದ-ದೇಶದೊಳಗೆ ಒಳ್ಳೇ ಸ್ಥಿತ್ಯಂತರ ವಾಗುವದಾಗಿ 'ಗಾರ್ಡಿಯನ್' ಕರ್ತರು ವರ್ಣಿಸು ತ್ತಾರೆ. "ಹಿಂದೀಯರ ವಿಸ್ವಾಸ ಸಂಗ್ರಹವಾಗುವದು, ಹಿಂದುಸ್ಥಾನದ ಮೇಲೆ ಸಾಮ್ರಾಜ್ಯಕರ್ತರ ನಿರ್ದಂ ಧವಿರುತ್ತವೆಂಬ ಭಾವನೆ ಬಯಲಾಗುವದು; ಹಿಂದೀ ಯರು ರಾಜ್ಯಭಾರವನ್ನು ನಡಿಸಲು ಕಲಿಯುವರು, ಯುದ್ಧೋತ್ತರ ತಂತ್ರತೆಯನ್ನು ಪ್ರಸ್ತಾಪಿಸಲಿಕ್ಕೂ ತಡಿಕ್ಕನುಗುಣವಾಗಿ ರಾಜ್ಯಪಟಿನೆಯನ್ನು ತಯಾರಿ ಸಿಕೊಳ್ಳಲಿಕ್ಕೂ ಅನುಕೂಲವಾಗುವದು" ಎಂದು 'ಗಾರ್ಡಿಯನ್' ಕರ್ತರು ಬರೆದ ಸಂಗತಿಗಳನ್ನು ನಾವು ಅಂತಃಕರಣಪೂರ್ವಕವಾಗಿ ಪುರಸ್ಕರಿಸುತ್ತೇವೆ. ಯುದ್ಧೋತ್ತರ ಆಗಲಿಕ್ಕಿದ್ದ ಘಟನೆಗಳನ್ನು ಇದೀಗ ಲೇ ಸಾಮ್ರಾಜ್ಯಕರ್ತರು ನಮ್ಮಾ ಹಿಂದುಸ್ಥಾನ ದೊಳಗೆ ರೂಢಗೊಳಿಸುವದು ತೀರ ಶ್ರೇಯಸ್ಕರವಾ ದದ್ದು. ಸರ್ ತೇಜಬಹಾದ್ದೂರ ಸಪ್ರು ನೇ! ನಾ! ಶ್ರೀನಿವಾಸ ಶಾಸ್ತ್ರಿ ಪ್ರಭೃತಿ ಮುದ್ಧಕ್ಕರು ಯುದ್ಧಕಾಲದಲ್ಲಿ ಲೋಕನಾಯಕರ ಸಹಕಾರವನ್ನು ಒಡಗಿಸಿಕೊಳ್ಳಲು ಕೆಲವು ಮಾರ್ಗಾಟ್ಟಿಗಳನ್ನು ಸೂಚಿಸಿದ್ದಾರೆ. ಅವನ್ನು ಲಂಡನ್ನಿನ 'ಟೈಮ್ಸ್' ಕರ್ತರು ಸಹ ಪುರಸ್ಕರಿಸಿ ಬ್ರಿಟಿಶ ಮುಖ್ಯ ಪ್ರಧಾನಾದ ಮಿ॥ ಚರ್ಚಿಲ್ಲರವರು ಈ ಸಂಧಿಯ ಪ್ರಯೋಜನ ಪಡೆಯಬೇಕೆಂಬ ಸಲಹೆ ಕೊಟ್ಟರುತ್ತಾರೆ ಕಡೆದ ಗುರುವಾರ ವಿಲಾಯತಿಯಲ್ಲಿ ಪಾರ್ಲಿಮೆಂಟಿನ ಸಭೆ ಸೇರಿತ್ತು. ಆ ಸಮಯ ಸಭಾನಸರು ಹಿಂದು ಸ್ಥಾನವನ್ನು ಸಂತೈಸುವ ಅಪಸ್ಥಾಕತೆಯನ್ನು ಪ್ರತಿ ಪಾದಿಸಿದ ಸಂಗತಿ ವಿಜ್ಞಾಂಠಾರ್ಹವಿದೆ ಹಿಂದೆಯಾಸಿ ಗಳ ವಿಶ್ವಾಸವನ್ನು ಸಂಪಾದಿಸುವದೀಗ ಅವಶ್ಯವಿದೆ ಯೆಂದು ಕೂಲಿಕಾರ ಪಕ್ಷದ ಸಭಾನಾಂದ ಮಿ॥ ಪೆಟ್ರಿಕ್ ಲೊರೆನ್ಸರವರು ಹೇಳಿದ ಮಾತಿಗೆ ಯಾರೂ ತಲೆಡಿಸಗಲೇ ಬೇಕು. ಅದೇ ದಿನ ದೊರೆಗಳ ಸಭೆ ಯಲ್ಲಿ ಸೆವ್ಯಲ್ಲು ದೊರೆಗಳು ಬಾರ್ಡೋಲಿಯ ನಿರ್ಣಯವನ್ನು ಸ್ವಾಗತಿಸುವದು ಸಾಮ್ರಾಜ್ಯ ಸರ ಕಾರದ ಕರ್ತವ್ಯವಿನಯೆಂದು ಪ್ರಧಾನ ಮಂತ್ರಿಗಳ ತಿಳಿಸಿಬಿದ್ದಾರೆ. ಹಿಂದೀ ಲೋಕನಾಯಕರು ಈವಾಗ ಸ್ವಾತಂತ್ರ್ಯವೆಂದು ಸೆಮ್ಮುಲಾಲ ಜೊರೆಗಳ ಪ್ರಶಂ ಸೆ! ರಾಷ್ಟ್ರೀಯ ಸಭೆಯವರಿಗೆ ಇಂಥ ಸ್ತುತಿ ಬೇಡ, ಸಿಂದೆಯಾ ಇವಸ್ಥಾನಿಲ್ಲ! ಸ್ತುತಿ-ನಿಂದೆಗಳನ್ನು ರಾಷ್ಟ್ರೀ ಯ ಸಭೆಯವರು ಅಲಕ್ಷಿಸಿ, ನಿತಾಂತ ರಾಷ್ಟ್ರ ಹಿತ ದೃಷ್ಟಿಯಿಂದ ರಾಷ್ಟ್ರಕಾರ್ಯವನ್ನು ನಡಿಸು ತ್ತಿವಾರೆ ಸಾಮ್ರಾಜ್ಯಕರ್ತರು ಕಾಲಪ್ರತಿತಿಯನ್ನು ಸಹಾನುಭೂತಿಯಿಂದ ಅಭ್ಯಾಸ ಮಾಡಬೇಕಾಗಿ ನಾವ ವಿನಂತಿ ಮಾಡಿಕೊಳ್ಳುತ್ತೇವೆ

